EMAIL : dairyadadaari@gmail.com ಸಂಪುಟ: 01 ಸಂಚಿಕೆ: 159

ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

ಮಂಗಳವಾರ: 02-06-2026

## "ರಾಯಚೂರಿಗೆ ಮತ್ತೆ ಯಾರಿಗೆ ಒಲಿಯಲಿದೆ ಮಂತ್ರಿ ಗಾದಿ? ಸಚಿವ ಸ್ಥಾನದ ರೇಸ್‌ನಲ್ಲಿ ಹಲವು ಪ್ರಭಾವಿ ನಾಯಕರು"

### ಡಿಕೆಶಿ ಸಂಪುಟ ರಚನೆ ಬೆನ್ನಲ್ಲೇ ಜಿಲ್ಲೆಯಲ್ಲಿ ಗರಿಗೆದರಿದ ರಾಜಕೀಯ ಚಟುವಟಿಕೆ; ಶಾಸಕರು, ಎಂಎಲ್‌ಸಿಗಳಿಂದ ತೀವ್ರ ಲಾಬಿ

ಧೈರ್ಯದ ದಾರಿ

**ರಾಯಚೂರು :** ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಸಿದ್ದರಾಮಯ್ಯ ಅವರು ಹೈಕಮಾಂಡ್ ಸೂಚನೆಯಂತೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಉಪಮುಖ್ಯಮಂತ್ರಿಯಾಗಿದ್ದ ಡಿ.ಕೆ.ಶಿವಕುಮಾರ್ ಅವರು ಸಿಎಂ ಸ್ಥಾನಕ್ಕೇರಲು ಸಜ್ಜಾಗಿದ್ದಾರೆ. ಈ ಮಧ್ಯೆ ಜಿಲ್ಲೆಯಲ್ಲಿ ಸಚಿವ ಸ್ಥಾನದ ಚರ್ಚೆ ಗರಿಗೆದರಿದೆ. ಜಿಲ್ಲೆಯ 7 ವಿಧಾನಸಭಾ ಕ್ಷೇತ್ರದ ಪೈಕಿ 4 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನವರೇ ಶಾಸಕರಿದ್ದು, ನಾಲ್ವರು ವಿಧಾನ ಪರಿಷತ್ ಸದಸ್ಯರಿದ್ದಾರೆ.

**ಎನ್.ಎಸ್.ಬೋಸುರಾಜ್ :** ಸಿದ್ದರಾಮಯ್ಯ ಸಂಪುಟದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರಾದ ಹಾಲಿ ಸಚಿವ ಎನ್.ಎಸ್.ಬೋಸರಾಜು ಅವರು ಡಿ.ಶಿವಕುಮಾರ್ ಸಂಪುಟದಲ್ಲಿಯೂ ಮುಂದುವರೆಯುವ ಆಸೆ ಇಟ್ಟುಕೊಂಡಿದ್ದು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಮುಖ್ಯವಾಗಿ ಕಾಂಗ್ರೆಸನ ನಾಲ್ವರು ಶಾಸಕರೂ ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದು, ಇವರಲ್ಲಿ ಹಿರಿಯರಾದ ಐದು ಬಾರಿ ಶಾಸಕರಾದ ಸಿಂಧನೂರು ಕ್ಷೇತ್ರದ ಹಂಪನಗೌಡ ಬಾದರ್ಲಿ ಅವರು ಮುಂಚೂಣಿಯಲ್ಲಿದ್ದಾರೆ. ಜಿಲ್ಲೆಗೆ ಒಂದು ಸಚಿವ ಸ್ಥಾನ ನೀಡಿದರೆ ಹಿರಿತನದ ಆಧಾರದಲ್ಲಿ ಇವರಿಗೆ ಸ್ಥಾನ ನೀಡಬಹುದು ಎಂದು ಹೇಳಲಾಗುತ್ತಿದೆ.

ಹಂಪನಗೌಡ ಬಾದರ್ಲಿ ಅವರಿಗೆ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವ ಸ್ಥಾನ ಸಿಗಬಹುದು ಎಂಬ ನಿರೀಕ್ಷೆಯಿತ್ತು. ಆದರೆ ಕೊನೆ ಕ್ಷಣದಲ್ಲಿ ಎಂಎಲ್‌ಸಿ ಎನ್.ಎಸ್.ಬೋಸರಾಜು ಅವರಿಗೆ ಸಚಿವ ಸ್ಥಾನ ಸಿಕ್ಕಿತ್ತು. ಇವರಲ್ಲದೆ ಜಿಲ್ಲೆಯ ನಾಲ್ವರು ಕಾಂಗ್ರೆಸ್ ಶಾಸಕರ ಪೈಕಿ ಎಲ್ಲರೂ ಒಂದಕ್ಕಿಂತ ಹೆಚ್ಚು ಬಾರಿ ಶಾಸಕರಾಗಿದ್ದು, ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.

**ಹಂಪಯ್ಯ ನಾಯಕ :** ಮಾನ್ವಿ ಕ್ಷೇತ್ರದ ಹಾಲಿ ಶಾಸಕರಾಗಿರುವ ಹಂಪಯ್ಯ ನಾಯಕ ಅವರು ಕಾಂಗ್ರೆಸನಿಂದ ಮೂರು ಬಾರಿ



ಶಾಸಕರಾಗಿದ್ದಾರೆ. ಹಿರಿಯರಾದ ಇವರೂ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಎಸ್ಟಿ ಕೋಟಾದಲ್ಲಿ ಸ್ಥಾನ ನೀಡಬೇಕು ಎಂದು ಹೈಕಮಾಂಡ್ ಮಟ್ಟದಲ್ಲಿ ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದಾರೆ ಎನ್ನಲಾಗಿದೆ.

**ಬಸನಗೌಡ ದದ್ದಲ್ :** ರಾಯಚೂರು ಗ್ರಾಮೀಣ ಕ್ಷೇತ್ರದಿಂದ ಸತತ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಬಸನಗೌಡ ದದ್ದಲ್ ಅವರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಸಿದ್ದರಾಮಯ್ಯನವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಇವ ಎಸ್‌ಟಿ ಕೋಟಾದಡಿ ಸಚಿವ ಸ್ಥಾನ ನೀಡಬೇಕ ಪಟ್ಟು ಹಿಡಿದಿದ್ದಾರೆ. ಪ್ರಸ್ತುತ ಸಂಪುಟ ದರ್ಜೆಯ ವಾಲ್ಮೀಕಿ ಅಭಿವೃದ್ಧಿ ನಿಮಗದ ಅಧ್ಯಕ್ಷರೂ ಆಗಿರುವ ದದ್ದಲ್ ತೆರೆಮರೆಯಲ್ಲಿ ಸಚಿವ ಸ್ಥಾನದ ಕಸರತ್ತು ನಡೆಸುತ್ತಿದ್ದಾರೆ.

**ಬಸನಗೌಡ ತುರ್ವಿಹಾಳ :** ಖಾದಿ ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರೂ ಆಗಿರುವ ಮಸ್ಕಿ ಕ್ಷೇತ್ರದ ಶಾಸಕ ಆರ್ ಬಸನಗೌಡ ತುರ್ವಿಹಾಳ ಅವರು ಎರಡು ಬಾರಿ ಶಾಸಕರಾಗಿದ್ದಾರೆ. ಇವರು ಎಸ್ಟಿ ಕೋಟಾದಲ್ಲಿ ಸಚಿವ ಸ್ಥಾನ ನೀಡಿದರೆ ತಮಗೆ ಆದ್ಯತೆ ನೀಡಬೇಕು ಎಂದು ಹೈಕಮಾಂಡ್ಗೆ ಮನವಿ ಮಾಡಿದ್ದು, ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದಾರೆ.

**ಎ.ವಸಂತಕುಮಾರ :** ವಿಧಾನ ಪರಿಷತ್ ಸದಸ್ಯರಾದ ಎ.ವಸಂತಕುಮಾರ ಅವರು ಪಕ್ಷಕ್ಕಾಗಿ ಅನೇಕ ವರ್ಷ ದುಡಿದಿದ್ದು, ತಮಗೂ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಬೇಕು ಎಂದು ಮನವಿ ಮಾಡಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಎಸ್ಸಿ ಕೋಟಾದಡಿ ಸಚಿವ ಸ್ಥಾನ ಬೇಕು ಎಂದು ಪ್ರಯತ್ನ ನಡೆಸಿದ್ದಾರೆ. ಅದರೆ ಇದುವರೆಗೆ ಬಹಿರಂಗವಾಗಿ ಹೇಳಿಕೆ ನೀಡಿಲ್ಲ. ಇವರು ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತ ವಲಯುದಲ್ಲಿ ಗುರುತಿಸಿಕೊಂಡಿದ್ದಾರೆ.

**ಬಸನಗೌಡ ಬಾದರ್ಲಿ:** ಏತನ್ಮಧ್ಯೆ ಸಿಂಧನೂರು ತಾಲೂಕಿನವರಾದ ಎಂಎಲ್ ಸಿ ಬಸನಗೌಡ ಬಾದರ್ಲಿ ಅವರು ಡಿ.ಕೆ ಶಿವಕುಮಾರ ಅವರ ಆಪ್ತರಾಗಿದ್ದು, ಅವರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಕಾಂಗ್ರೆಸ್ ಯುವ ಘಟಕದ ಮುಂಚೂಣಿ ನಾಯಕರಲ್ಲಿ ಒಬ್ಬರಾಗಿರುವ ಇವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿಯಾಗಿ ಬಂಡಾಯ ಎದ್ದಿದ್ದರು. ಬಳಿಕ ಪಕ್ಷ ಅವರಿಗೆ ಚುನಾವಣೆ ಬಳಿಕ ಸೂಕ್ತ ಸ್ಥಾನಮಾನ ನೀಡಲಿದೆ ಎಂದು ಸಮಾಧಾನ ಪಡಿಸಿ ಎಂಎಲ್ಸಿ ಮಾಡಿದ್ದರು. ಹಾಲಿ ಶಾಸಕ ಹಾಗೂ ತಾತನವರಾದ ಹಂಪನಗೌಡ ಗೌಡ ಬಾದರ್ಲಿಗೆ ಸೆಡ್ಡು ಹೊಡೆದು ಸಚಿವ ಸ್ಥಾನ ಪಡೆದರೂ ಆಶ್ಚರ್ಯವಿಲ್ಲ.

ಪಕ್ಷದ ಹೈಕಮಾಂಡ್ ಯಾರಿಗೆ ಮಣೆ ಹಾಕುತ್ತಾರೆ ಎನ್ನುವುದು ಕಾದು ನೋಡಬೇಕಿದೆ. ಸಚಿವ ಸ್ಥಾನ ಹಂಚಿಕೆಯಲ್ಲಿ ಕೇವಲ ಜಿಲ್ಲೆ ಮಾತ್ರವಲ್ಲ, ಜಾತಿ ಸಮೀಕರಣ, ವೈಯಕ್ತಿಕ ವರ್ಚಸ್ಸು ಕೆಲಸ ಮಾಡಲಿದ್ದು ಆದ್ದರಿಂದ ಸಚಿವಕಾಂಕ್ಷಿಗಳು ದಿಲ್ಲಿ ಹಾಗೂ ರಾಜ್ಯ ನಾಯಕರ ದುಂಬಾಲು ಬಿದ್ದಿದ್ದಾರೆ.

## ವಾಣಿಜ್ಯ ಸಿಲಿಂಡರ್ ಏರಿಕೆ ಖರ್ಗೆ ಕಿಡಿ

**ಕಲಬುರಗಿ,ಜೂ.1–** ವಾಣಿಜ್ಯ ಗ್ಯಾಸ್ ಸಿಲಿಂಡರ್ ದರ ಮತ್ತೆ ಏರಿಕೆ ಮಾಡಿರುವುದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಿಡಿ ಕಾರಿದ್ದಾರೆ.ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಗ್ಯಾಸ್, ಪೆಟ್ರೋಲ್, ಡಿಸೇಲ್ ಪ್ರತಿಯೊಂದರ ಬೆಲೆಯನ್ನು ದಿನ ಬಿಟ್ಟು ದಿನ ಏರಿಕೆ ಮಾಡುತ್ತಿದ್ದು, ಅವರಿಗೆ ದೇಶದ ಜನರ ಬಗ್ಗೆ ಕಾಳಜಿ ಇಲ. ಮೋದಿ ಅವರು ಜನರ ವಿಶ್ವಾಸ ಕಳೆದುಕೊಂಡಿದ್ದಾರೆ.



ಬರೀ ಮಾತಿನಿಂದ ಜನರ ಸಮಸ್ಯೆ ಬಗ್ಗೆ ಪರಿಹಾರ ಹೇಳುತ್ತಾರೆ. ಆದರೆ ನಿಜವಾದ ಪರಿಹಾರ ಮಾಡುತ್ತಿಲ್ಲ. ಮಾತು ಮಾತಿಗೂ ವಿರೋಧ ಪಕ್ಷದವರ ಸಹಕಾರ ಇಲ್ಲ ಎಂದು ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೂಪಾಯಿ ಬೆಲೆ ದಿನ ದಿನಕ್ಕೆ ಕಡಿಮೆಯಾಗುತ್ತಿದೆ. ನೀರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ. ಮನರೇಗಾ ಸೇರಿ ಹಲವು ಕಾರ್ಯಕ್ರಮಕ್ಕೆ ಇವರ ಬಳಿ ಹಣ ಇಲ್ಲ. ಈ ಕೇಂದ್ರ ಸರ್ಕಾರ ಮಾತಿನ ಮಲ್ಲನ ಸರ್ಕಾರವಾಗಿದೆ ಎಂದು ಟೀಕಿಸಿದರು.

## ಪರಿಶಿಷ್ಟ ವರ್ಗಗಳ ಕಲ್ಯಾಣಾ ಇಲಾಖೆಯ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ನೀಡಿ: ಹನುಮೇಶ ನಾಯಕ ಸಾದಾಪುರ



ಧೈರ್ಯದ ದಾರಿ

**ಮಾನ್ವಿ :** ಪಟ್ಟಣದ ಪತ್ರಿಕಾ ಭವನದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ಜಿಲ್ಲಾಘಟಕದ ಅಧ್ಯಕ್ಷರಾದ ಹನುಮೇಶ ನಾಯಕ ಸಾದಾಪುರ ಮಾತನಾಡಿ ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದ ಮಕ್ಕಳು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದ್ದು ಗ್ರಾಮೀಣ ಭಾಗದ ಪ.ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರೆಯಲ್ಲಿ ಎನ್ನುವ ಉದ್ದೇಶದಿಂದ ಸರಕಾರವು ಪರಿಶಿಷ್ಟ ವರ್ಗಗಳ ಕಲ್ಯಾಣಾ ಇಲಾಖೆಯ ಮೂಲಕ ವಿದ್ಯಾರ್ಥಿಗಳಿಗೆ ಪಟ್ಟಣದಲ್ಲಿ ಹಲವು ವಸತಿ ನಿಲಯಗಳ ಮೂಲಕ ವಸತಿ ವ್ಯವಸ್ಥೆ ಕಲ್ಪಿಸಿ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯ ಮೂಲ ಸೌಕರ್ಯಕ್ಕಾಗಿ ಲಕ್ಷಾಂತರ ಅನುದಾನವನ್ನು ನೀಡುತ್ತಿದ್ದಾರು ಕೂಡ ಪರಿಶಿಷ್ಟ ವರ್ಗಗಳ ಕಲ್ಯಾಣಾ ಇಲಾಖೆಯ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಕನಿಷ್ಟ ಸೌಲಭ್ಯಗಳು ಕೂಡ ದೊರೆಯುತ್ತಿಲ್ಲ. ಉತ್ತಮ ಗುಣಮಟ್ಟದ ಆಹಾರ ,ಶುದ್ದಕುಡಿಯುವ ನೀರು ಕೂಡ ನೀಡುತ್ತಿಲ್ಲ. ಸರಕಾರದ ಅನುದಾನ 2ನೇಪುಟಕ್ಕೆ

## ಸಚಿವ ಸಂಪುಟಕ್ಕೆ ಬೋಸರಾಜ್ ಮುಂದುವರಿಕೆ, ಜಿ. ಹಂಪಯ್ಯ ನಾಯಕರಿಗೆ ಸಚಿವ ಸ್ಥಾನ ನೀಡಬೇಕು : ಪಪಂ ಅಧ್ಯಕ್ಷರಾದ ಹಾಜಿ ಚೌದ್ರಿ ಒತ್ತಾಯ.

ಧೈರ್ಯದ ದಾರಿ

**ಸಿರವಾರ:** ರಾಜ್ಯದಲ್ಲಿ ಹೊಸ ಸರ್ಕಾರ ರಚನೆಯಾಗುತ್ತಿರುವ ಈ ಸಂದರ್ಭದಲ್ಲಿ, ರಾಯಚೂರು ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಜಿಲ್ಲೆಯ ಇಬ್ಬರು ಪ್ರಮುಖ ನಾಯಕರಿಗೆ ಸಚಿವ ಸ್ಥಾನ ನೀಡಬೇಕೆಂದು ಸಿರವಾರ ಪಟ್ಟಣ ಪಂಚಾಯತ್ ಅಧ್ಯಕ್ಷ ಹಾಜಿ ಚೌದ್ರಿ ಅವರು ಕಾಂಗ್ರೆಸ್ ಹೈಕಮಾಂಡ್ ಮತ್ತು ಮುಖ್ಯಮಂತ್ರಿಯವರಿಗೆ ಆಗ್ರಹಿಸಿದ್ದಾರೆ.



ಜಿ. ಹಂಪಯ್ಯ ನಾಯಕ ಅವರಿಗೆ ಸಚಿವ ಸ್ಥಾನ: ಇದರ ಜೊತೆಗೆ, ಎಸ್.ಟಿ. (ಪರಿಶಿಷ್ಟ ಪಂಗಡ) ಕೋಟಾದ ಅಡಿಯಲ್ಲಿ ಹಿರಿಯ ನಾಯಕರಾದ ಜಿ. ಹಂಪಯ್ಯ ನಾಯಕ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕು. ಅವರ ಸುದೀರ್ಘ ರಾಜಕೀಯ ಸೇವೆ ಮತ್ತು ಪ್ರಾದೇಶಿಕ ಸಮತೋಲನವನ್ನು ಕಾಯ್ದುಕೊಳ್ಳಲು ಈ ಕ್ರಮ ಅತ್ಯಗತ್ಯ ಎಂದು ಹಾಜಿ ಚೌದ್ರಿ ಒತ್ತಾಯಿಸಿದ್ದಾರೆ.

**ಹಾಜಿ ಚೌದ್ರಿ ಅವರ ಪ್ರಮುಖ ಬೇಡಿಕೆಗಳು:**

ಎನ್.ಎಸ್. ಬೋಸರಾಜ್ ಮುಂದುವರಿಕೆ: ರಾಯಚೂರಿನ ಹಿರಿಯ ರಾಜಕಾರಣಿ ಹಾಗೂ ಈ ಹಿಂದೆ ಸಚಿವರಾಗಿ ಸೇವೆ ಸಲ್ಲಿಸಿರುವ ಎನ್.ಎಸ್. ಬೋಸರಾಜ್ ಅವರು ಜಿಲ್ಲೆಯ ಅಭಿವೃದ್ಧಿಗೆ ನೀಡಿರುವ ಕೊಡುಗೆ ಮತ್ತು ಅವರ ರಾಜಕೀಯ ಅನುಭವವನ್ನು ಪರಿಗಣಿಸಿ, ಅವರನ್ನು ಮುಂಬರುವ ಸಚಿವ ಸಂಪುಟದಲ್ಲೂ ಮುಂದುವರಿಸಬೇಕು ಎಂದು ಮನವಿ ಮಾಡಿದ್ದಾರೆ.

**ಬೇಡಿಕೆಯ ಹಿಂದಿನ ಉದ್ದೇಶ:** ರಾಯಚೂರು ಜಿಲ್ಲೆಯು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಲು ಸಮರ್ಥ ಮತ್ತು ಅನುಭವಿ ನಾಯಕರಿಗೆ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ಕಲ್ಪಿಸುವುದು ಅವಶ್ಯಕ. ಈ ಇಬ್ಬರು ನಾಯಕರಿಗೆ ಅವಕಾಶ ನೀಡಿದರೆ ಜಿಲ್ಲೆಯ ಮೂಲಸೌಕರ್ಯ, ನೀರಾವರಿ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ವೇಗ ಸಿಗಲಿದ್ದು, ಇದು ಜಿಲ್ಲೆಯ ಜನತೆಯ ನಿರೀಕ್ಷೆಯೂ ಆಗಿದೆ ಎಂದು ಹಾಜಿ ಚೌದ್ರಿ ತಿಳಿಸಿದ್ದಾರೆ.

## ಕಲ್ಮಠ ವಿದ್ಯಾ ಸಂಸ್ಥೆಯಲ್ಲಿ ಶಾಲಾ ಪ್ರಾರಂಭೋತ್ಸವ

## ಮಕ್ಕಳು ಹಂಚಿಕೊಂಡು ತಿನ್ನುವ ಗುಣ ಬೆಳೆಸಿಕೊಳ್ಳಬೇಕು: ವಿರೂಪಾಕ್ಷ ಪಂಡಿತಾರಾಧ್ಯ ಸ್ವಾಮಿಗಳು



ಧೈರ್ಯದ ದಾರಿ

**ಮಾನವಿ:** ಕಲ್ಮಠ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ವಿರೂಪಾಕ್ಷ ಪಂಡಿತಾರಾಧ್ಯ ಸ್ವಾಮಿಗಳು "ಮಕ್ಕಳು ಹಂಚಿಕೊಂಡು ತಿನ್ನುವ ಗುಣ ಬೆಳೆಸಿಕೊಳ್ಳಬೇಕು. ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬೆಳೆದು ಹಿರಿಯರು, ಹೆತ್ತವರು, ಶಿಕ್ಷಕರಿಗೆ ಗೌರವ ನೀಡುವ ಗುಣ ಕಲಿಯಿರಿ" ಎಂದು ಆಶೀರ್ವಚನ ನೀಡಿದರು.

ಸೋಮವಾರ ಪಟ್ಟಣದ ಕಲ್ಮಠ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಕಲ್ಮಠ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಗಳಾದ ಸಂಗಯ್ಯ ಸ್ವಾಮಿ ಕಲ್ಮಠ* ಅವರು ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಿ ಮಾತನಾಡಿದರು.

ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ *ಮಂಜುನಾಥ ಕಮತರ* ಅಧ್ಯಕ್ಷತೆ ವಹಿಸಿದ್ದರು. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ಎಸ್. ಪಾಟೀಲ್, ಪದವಿ ಕಾಲೇಜಿನ ಪ್ರಾಚಾರ್ಯ ಸಿದ್ದನಗೌಡ ಪಾಟೀಲ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಪ್ರಭಯ್ಯ ಸ್ವಾಮಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ನರಸಿಂಹ ಸರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಎಂ.ಎಂ. ಹಿರೇಮಠ ಕಾರ್ಯಕ್ರಮ ನಿರೂಪಿಸಿದರು, ಕೆಮ್ಮನಾಯ್ಕ ಸ್ವಾಗತಿಸಿದರು, ರವಿ ಹುಲಿಯಾಪುರ ವಂದನಾರ್ಪಣೆ ಮಾಡಿದರು. ಭ್ರಮರಾಂಬ, ಜಯಶ್ರೀ, ಮಹಾಂತಮ್ಮ, ರೂಪ, ಪವಿತ್ರ, ರಿಜ್ವಾನಾ, ಸೌಮ್ಯ ಹಿರೇಮಠ, ರಾಘವೇಂದ್ರ, ಪ್ರಭಾವತಿ ಶಿಕ್ಷಕರು ಹಾಗೂ ಪಾಲಕರಾದ ಸುರೇಶ್, ಹನುಮಂತ, ಮಾದೇವಪ್ಪ, ಲಕ್ಷ್ಮಿ, ಕಾಜಾ ಬೇಗ, ಮೌನಿಕ, ಯಲ್ಲಪ್ಪ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## "ಖಾಯಂ ಶಿಕ್ಷಕರ ಕೊರತೆ ನಡುವೆ ಶೈಕ್ಷಣಿಕ ವರ್ಷ ಆರಂಭ"

ಧೈರ್ಯದ ದಾರಿ

**ಮಾನ್ವಿ –:** ತಾಲೂಕು ಶಿಕ್ಷಣ ಇಲಾಖೆಯು 2026–27ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದ್ದು ಜೂ1 ರಂದು ತಾಲೂಕಿನಲ್ಲಿ ಶಾಲೆಗಳ ಪ್ರಾರಂಭಕ್ಕೆ ಅಗತ್ಯವಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ.





ಮಾನ್ವಿ, ಸಿರವಾರ, ಮಸ್ಕಿ ತಾಲೂಕಿನ ಕೆಲವು ಹಳ್ಳಿಗಳು ಸೇರಿ ಮೂರು ತಾಲೂಕಿಗೆ ಒಂದೇ ಶಿಕ್ಷಣ ಕಚೇರಿ ಇದ್ದು, ಮಾನ್ವಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವ್ಯಾಪ್ತಿಯಲ್ಲಿ ಅಖಂಡ ಮಾನ್ವಿಗೆ ಒಂದೇ ಕಚೇರಿ ಇರುವುದರಿಂದ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದ ಗುಣಮಟ್ಟದ ಶಿಕ್ಷಣದ ಮೇಲೆ ಪರಿಣಾಮ ಉಂಟಾಗುತ್ತಿದ್ದು ಸಿರವಾರ ತಾಲೂಕಿಗೆ ಪ್ರತ್ಯಕ ಶಿಕ್ಷಣ ಇಲಾಖೆ ಕಚೇರಿ ಪ್ರಾರಂಭ ಮಾಡಬೇಕಾಗಿದೆ.

ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪಠ್ಯಪುಸ್ತಕಗಳು ಸೇರಿದಂತೆ ಸಮವಸ್ತ್ರ ಕಲಿಕಾ ಉಪಕರಣಗಳನ್ನು ವಿತರಿಸುವುದಕ್ಕೆ ಅಗತ್ಯ ವ್ಯವಸ್ಥೆ ಮಾಡಲಾಗಿದ್ದು ಶಾಲೆಗಳ ವಿದ್ಯಾರ್ಥಿಗಳಿಗೆ ಶಾಲೆ ಪ್ರಾರಂಭದಲ್ಲಿ ನೀಡಲಾಗುತ್ತಿದೆ.

ಕಚೇರಿ ವ್ಯಾಪ್ತಿಯ ಮಾನ್ವಿ ಸಿರವಾರ ಹಾಗೂ ಮಸ್ಕಿ ತಾಲೂಕಿನ ಕೇಲವು ಗ್ರಾಮಗಳು ಸೇರಿ ತಾಲೂಕಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳು 273, ಪ್ರೌಡಶಾಲೆಗಳು 43 ಸೇರಿ ಒಟ್ಟು 316 ಶಾಲೆಗಳು, ಅನುದಾನಿತ ಪ್ರಾಥಮಿಕ ಶಾಲೆಗಳು 6, ಪ್ರೌಡಶಾಲೆ 1,ಅನುದಾನ ರಹಿತ ಖಾಸಗಿ ಶಾಲೆಗಳು 101, ಪ್ರೌಡಶಾಲೆ 25, ವಸತಿ ಶಾಲೆ 11, ವಸತಿರಹಿತ ಶಾಲೆ 1, ಕಸ್ತೂರಿ ಬಾ ಗಾಂಧಿ ಶಾಲೆ ಮಲ್ಲಟ, ಕರ್ನಾಟಕ ಪಬ್ಲಿಕ್ ಶಾಲೆ 2, ತಾಲೂಕಿಗೆ ನೂತನವಾಗಿ 8 ಕರ್ನಾಟಕ ಪಬ್ಲಿಕ್ ಶಾಲೆಗಳು ಮಂಜೂರಾಗಿವೆ. ಒಟ್ಟು 68,206 ವಿದ್ಯಾರ್ಥಿಗಳು ತಾಲೂಕಿನ ವಿವಿಧ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ.

ತಾಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ಮಂಜೂರಾಗಿರುವ ಶಿಕ್ಷಕರ ಹುದ್ದೆಗಳು 1569 ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು 625 ಖಾಲಿ ಇರುವ ಶಿಕ್ಷಕರ ಸಂಖ್ಯೆ 944, ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಟ್ಟು ಮಂಜೂರಾಗಿರುವ ಶಿಕ್ಷಕರ ಹುದ್ದೆಗಳು 418 ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು 186, ಖಾಲಿ ಇರುವ ಶಿಕ್ಷಕರ ಸಂಖ್ಯೆ 236 ಇದ್ದು ಇಷ್ಟೆಲ್ಲ 2ನೇಪುಟಕ್ಕೆ

ಮೊದಲನೇ ಪುಟದಿಂದ

## ಪರಿಶಿಷ್ಟ ವರ್ಗಗಳ ಕಲ್ಯಾಣಾ ಇಲಾಖೆಯ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ನೀಡಿ: ಹನುಮೇಶ ನಾಯಕ ಸಾದಾಪುರ

ದುರ್ಬಳಕೆ ಮಾಡಿಕೊಳ್ಳಲಾಗಿದೆ ಅದ್ದರಿಂದ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಹಾಲಿಂಗಪ್ಪ ಇಂಗಳದಾಳ ಅವರನ್ನು ತಾಲೂಕಿನಿಂದ ವರ್ಗವಣೆ ಮಾಡಬೇಕು ಹಾಗೂ ವಿದ್ಯಾರ್ಥಿಗಳ ಹೆಸರಿನಲ್ಲಿ ಬಿಡುಗಡೆಯಾದ ಎಲ್ಲಾ ಅನುದಾನಗಳ ಬಳಕೆಯ ಕುರಿತು ತನಿಖೆ ನಡೆಸಬೇಕು. ಹಾಗೂ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ವಸತಿ ಶಾಲೆಯಲ್ಲಿ ಕನಿಷ್ಟ ಮೂಲಸೌಲಭ್ಯಕಲ್ಪಿಸಬೇಕು, ಮತ್ತು ಗುಣಮಟ್ಟದ ಆಹಾರ ವಿತರಿಸಬೇಕು ಎಂದು ಮುಂದಿನ ದಿನಗಳಲ್ಲಿ ನಮ್ಮ ಸಂಘಟನೆ ವತಿಯಿಂದ ತೀವ್ರ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.
.ಬುಡ್ಡಪ್ಪ ನಾಯಕ ಮಲ್ಲಿನಮಡಗು.ಹನುಮಂತ ಸೀಕಲ್, ರಮೇಶ ನಾಯಕ ಕಪಗಲ್.ಅಯ್ಯಪ್ಪ ನಾಯಕ ಮ್ಯಾಕಲ್ ಸೇರಿ ಇನ್ನಿತರರು ಇದ್ದರು.

## "ಖಾಯಂ ಶಿಕ್ಷಕರ ಕೊರತೆ ನಡುವೆ ಶೈಕ್ಷಣಿಕ ವರ್ಷ ಆರಂಭ"

ಶಿಕ್ಷಕರ ಕೊರತೆ ನಡುವೆ ಶಿಕ್ಷಣ ಇಲಾಖೆ ಈ ವರ್ಷ ಅದೇಗೆ ಉತ್ತಮ ಕಲಿಕಾ ಶಿಕ್ಷಣ ನೀಡುತ್ತದೆಯೋ ಕಾದು ನೋಡಬೇಕು. ಇನ್ನೂ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು, ಬಳಕೆ ನೀರು, ಶೋಚಾಲಯ, ಕೊಠಡಿಗಳ ಕೊರತೆ, ಮಳೆ ಬಂದರೆ ಸೋರುವ ಕೊಠಡಿಗಳು, ಮರಗಳು ಇಲ್ಲದೆ ನೆರಳಿನ ಕೊರತೆ, ಮಕ್ಕಳು ಕುಳಿತುಕೊಳ್ಳಲು ಬೆಂಚುಗಳ ಕೊರತೆ, ಶಾಲಾ ಗ್ರಂಥಾಲಯ ಕೊರತೆ, ಉತ್ತಮ ಬಿಸಿಯೂಟ ಕೊರತೆ ಹೀಗೆ ಅನೇಕ ಕೊರತೆಗಳನ್ನು ಸರಿಪಡಿಸಿಕೊಂಡು ಹೋಗಬೇಕಾದ ಹೆಚ್ಚಿನ ಜವಾಬ್ದಾರಿ ಶಿಕ್ಷಣ ಇಲಾಖೆ ಮೇಲಿದೆ.

ತಾಲೂಕಿನ ಎಲ್ಲಾ ಶಾಲೆಗಳಲ್ಲಿ ಮೇ 30-31 ರಂದು ಸ್ವಚ್ಚತಾ ದಿನವಾಗಿ ಆಚರಿಸಿ ಶಾಲೆಗಳನ್ನು ಸ್ವಚ್ಚಮಾಡಲಾಗುವುದು. ಜೂ1 ರಂದು ಶಾಲಾ ಪ್ರಾರಂಭೋತ್ಸವವನ್ನು ಆಚರಿಸಿ ಪ್ರಸ್ತುತ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳನ್ನು ಶಾಲೆಗೆ ಬರಮಾಡಿಕೊಳ್ಳಲಾಗುವುದು. ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬುವುದಕ್ಕೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಬಿಸಿಯೂಟ ಸೇರಿದಂತೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ನೀಡಲಾಗುವುದು ಶಾಸಕರ ನೇತೃತ್ವದಲ್ಲಿ ಪಾಲಕ ಪೋಷಕರ ಮಹಾಸಭೆಯನ್ನು ಕರೆದು ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯ ಪುಸ್ತಕ ಕಲಿಕಾ ಸಾಮಾಗ್ರಿಗಳ ವಿತರಣೆ ಮಾಡಲಾಗುವುದು.
-:ಚಂದ್ರಶೇಖರ ದೊಡ್ಡಮನಿ ಮಾನ್ವಿ ಕ್ಷೇತ್ರ ಶಿಕ್ಷಣಾಧಿಕಾರಿ

# ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದಿಂದ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದ ವತಿಯಿಂದ ನಡೆದ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಚಾರ್ಯ ಮಹಾಸ್ವಾಮಿಗಳು ಆರ್ಶೀವಚನ ನೀಡಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಶಿಕ್ಷಣದಿಂದ ಮಾತ್ರ ಸಾಧ್ಯವಿದು ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತವಾದ ಗುರಿಯನ್ನಿಟ್ಟುಕೊಂಡು ನಿರಂತರ ಶ್ರಮದಿಂದ ಅಭ್ಯಾಸ ಮಾಡದಲ್ಲಿ ಮಾತ್ರ ಉತ್ತಮ ಅಂಕಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿದೆ. ವಿದ್ಯಾರ್ಥಿಗಳು ಶಿಕ್ಷಣದ ಜೋತೆಗೆ ಸಂಸ್ಕಾರ, ಮೌಲ್ಯಗಳನ್ನು ಹೊಂದಿದಾಗ ಮಾತ್ರ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗುವುದಕ್ಕೆ ಸಾಧ್ಯ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘವು ಆರ್ಯವೈಶ್ಯ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನು ನೀಡುವ ಉದ್ದೇಶದಿಂದ ಹಲವು ವರ್ಷಗಳಿಂದ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಜೋತೆಗೆ ಸಮಾಜದ ಎಲ್ಲಾ ಸಮುದಾಯಗಳವರಿಗಾಗಿ ಮಂತ್ರಾಲಯ ಪಾದಯಾತ್ರೆ. ಸೇರಿದಂತೆ ಅನೇಕ ಧಾರ್ಮಿಕ ,ಸಮಾಜಿಕ,ಶೈಕ್ಷಣಿಕವಾದ ಅನೇಕ ಕಾರ್ಯಕ್ರಮಗಳನ್ನು .ಆಯೋಜಿಸಿಕೊಂಡು ಬರುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 2025-26 ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ದ್ವಿತೀಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಶೇ. 70 ಹಾಗೂ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದ, ಪದವಿ ,ಸ್ನಾತಕೋತ್ತರ ಪದವಿ ಅಂತಿಮ ಪರೀಕ್ಷೆಯಲ್ಲಿ ಉತ್ತಮ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾದ ಮಾನ್ವಿ ತಾಲೂಕಿನ 65 ಕ್ಕೂ ಹೆಚ್ಚು ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.
ಮಯೂರಿ ನೃತ್ಯ ಕಲಾ ತಂಡದ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ ಗಮನ ಸೇಳೆಯಿತು.
ನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್.ಮುತ್ತುರಾಜ್ ಶೆಟ್ಟಿ , ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್.ಡಿ. ತಾಲೂಕು ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ರಾಜಾ ಸುಭಾಷಚಂದ್ರನಾಯಕ. ಮಾತನಾಡಿದರು.
ಕಾರ್ಯದರ್ಶಿ.ಬಿ. ಈರಣ್ಣ, ಆರ್.ದ್ವಾರಕನಾಥ್, ಡಿ.ರಾಘವೇಂದ್ರ, ಆರ್. ಪುರುಷೋತ್ತಮ, ಆರ್. ರಾಘವೇಂದ್ರ, ಬಿ.ಪವನ್. ವಿ. ಬಸವರಾಜ್ ,ಕುಮಾರ್, ವಾಸವಿ ಮಹಿಳಾ ಮಂಡಳಿ ತಾ. ಅಧ್ಯಕ್ಷರಾದ ಮಂಚಾಲಿ ಶೋಭಾ ಹಾಗೂ ಜಿ .ಲಕ್ಷ್ಮೀ, ಆರ್.ಲಕ್ಷ್ಮೀ, ಡಿ.ರಾದ, ಬಿ.ವೇದ ಸೇರಿದಂತೆ ತಾಲೂಕಿನ 5ನೂರಕ್ಕೂ ಹೆಚ್ಚು ಆರ್ಯವೈಶ್ಯ ಸಮುದಾಯದವರು ಭಾಗವಹಿಸಿದರು.

## ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಚಿತ್ರಕಲೆ, ಭಾಷಣ ಸ್ಪರ್ಧೆ

ಧೈರ್ಯದ ದಾರಿ




**ರಾಯಚೂರು,1:** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗ್ರೀನ್ ರಾಯಚೂರು ಸಂಸ್ಥೆ ವತಿಯಿಂದ ಚಿತ್ರಕಲೆ ಹಾಗೂ ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ ರಾಯಚೂರಿನ ಪರಿಸರ ಅಧಿಕಾರಿ ಡಾ. ಗಣಪತಿ ಹೆಗಡೆ ಮಾತನಾಡಿ, ಗಾಳಿ, ನೀರು ಹಾಗೂ ಭೂಮಿ ಮಾನವ ಜೀವನದ ಮೂಲಾಧಾರವಾಗಿದ್ದು, ಇವುಗಳನ್ನು ಸ್ವಚ್ಛವಾಗಿ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ರಾಸಾಯನಿಕ ಗೊಬ್ಬರ, ಕೀಟನಾಶಕ ಹಾಗೂ ಇತರೆ ರಾಸಾಯನಿಕಗಳ ಅತಿಯಾದ ಬಳಕೆಯಿಂದ ಪರಿಸರ ಮಾಲಿನ್ಯ ಹೆಚ್ಚುತ್ತಿದ್ದು, ಇದರ ದುಷ್ಪರಿಣಾಮ ಮುಂದಿನ ಪೀಳಿಗೆಯ ಆರೋಗ್ಯದ ಮೇಲೂ ಬೀಳಲಿದೆ ಎಂದು ಎಚ್ಚರಿಸಿದರು. ಪರಿಸರ ಸಂರಕ್ಷಣೆಗಾಗಿ 'ರಿಡ್ಯೂಸ್, ರಿಯೂಸ್ ಮತ್ತು ರಿಸೈಕಲ್' (3R) ತತ್ವಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು.

ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವ ಮೂಲಕ ಪರಿಸರ ರಕ್ಷಣೆಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಗ್ರೀನ್ ರಾಯಚೂರು ಸಂಸ್ಥೆಯ ಮುಖ್ಯಸ್ಥೆ ಶ್ರೀಮತಿ ಸರಸ್ವತಿ ಕಿಲಿಕಿಲಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪರಿಸರ ಸಂರಕ್ಷಣೆಯ ಮಹತ್ವ ಅರಿಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪರಿಸರ ಅಧಿಕಾರಿ ಗಿರೀಶ್ ಸಾಯಕ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾ ಸಂಚಾಲಕ ಡಾ. ದಂಡಪ್ಪ ಬಿರಾದಾರ್, ಉಪನ್ಯಾಸಕರಾದ ಮಲ್ಲನಗೌಡ ಎಸ್.ಎನ್., ಜ್ಯೋತಿ, ಗುರುರಾಜ ಪನ್ನೂರು, ಅನುಪಮ, ನಾಗವೇಣಿ ಸಾರೋಡೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪ್ರಜಾಪಿತಾ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದಲ್ಲಿ ವಿಶ್ವ ತಂಬಾಕು ನಿಷೇದ ದಿನಾಚರಣೆ,

# ತಂಬಾಕಿನ ಹೊಗೆ ಬಿಟ್ಟವನು ಬೇಗ ಹೊಗೆ ಹಾಕಿಸಿಕೊಳ್ಳುವ : ಡಾ. ಸುರೇಂದ್ರ ಬಾಬು.




ಧೈರ್ಯದ ದಾರಿ

ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ವಿದ್ಯಾಲಯದ ರಾಜಯೋಗಿನಿ ಬಿ.ಕೆ. ಸ್ಮಿತಾ ಅಕ್ಕನವರ ಅಧ್ಯಕ್ಷತೆ, ಕಾರ್ಯದರ್ಶಿಗಳಾದ ಬಿ.ಕೆ. ಶಾರದಾ ಅಕ್ಕನವರ ನೇತೃತ್ವದಲ್ಲಿ ವಿಶ್ವ ತಂಬಾಕು ನಿಷೇದ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟಕರಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸುರೇಂದ್ರ ಬಾಬು, ಆಗಮಿಸಿದ್ದರು, ಮಾನಸಿಕ ರೋಗ ತಜ್ಞರಾದ ಡಾ. ಮನೋಹರ ಪತ್ತಾರ, ಡಾ. ಸುಶ್ರೀತ್ ಎ. ನೀಲೋಪಂತ ರಿಮ್ಸ್ ಆಸ್ಪತ್ರೆ, ಡಾ. ದಂಡಪ್ಪ ಬಿರಾದಾರ ರೆಡ್ ಕ್ರಾಸ್ ಜಿಲ್ಲಾ ಸಂಚಾಲಕರು, ನೀಲಕಂಠರಾಯ ವಕೀಲರು ವೇದಿಕೆಯ ಮೇಲೆ ಆಶೀನರಾಗಿದ್ದರು.

ದೀಪ ಬೆಳಗುವ ಮೂಲಕ ಉದ್ಘಾಟಿಸಿದ ಡಾ. ಸುರೇಂದ್ರ ಬಾಬು ಮಾತನಾಡಿ ಪ್ರಜಾಪಿತಾ ಬ್ರಹ್ಮಕುಮಾರಿ ವಿದ್ಯಾಲಯದಲ್ಲಿ ವಿಶ್ವ ತಂಬಾಕು ನಿಷೇದ ದಿನಾಚರಣೆ ಮಾಡಿದ್ದು ಶ್ಲಾಘನೀಯವಾದುದು, ದೇಶ ನಾಡಿನಲ್ಲಿ ಹೆಚ್ಚಾಗಿ
ಯುವ ಪೀಳಿಗೆಯು ತಂಬಾಕಿನಿಂದ ಉಂಟಾಗುವ ಅನೇಕ ದುಷ್ಪರಿಣಾಮಗಳು ಗುರಿಯಾಗುತ್ತಿದ್ದಾರೆ, ಸಿಗರೇಟ್ ಸೇವನೆ ಇಲ್ಲದೆ ಮಲಮೂತ್ರ ಬರಲ್ಲ, ಗುಟ್ಕಾ ಹಾಕದಿದ್ದರೆ ಶೌಚ ಬರಲ್ಲ ಎಂದು ಇವೆಲ್ಲ ಅವರ ಮನಸ್ಸಿನಲ್ಲಿ ನಾಟಿಕೊಂಡಿವೆ ಹೊರತು ಅದೇ ಜೀವನ ಅಲ್ಲ, ಚಲನ ಚಿತ್ರ ತಾರೆಯರಂತೆ ಸಿಗರೇಟ್ ಸ್ಟೈಲ್ ಮಾಡಿ ಹಚ್ಚುವುದು ತಾರೆಯರಂತೆ ತಮ್ಮ ಬಾಯಿಯಿಂದಲೇ ತರಹ ತರಹದ ಹೊಗೆ ಬಿಡುವುದು ಕೊನೆಗೆ ಹತ್ತು ವರ್ಷ ಬದುಕುವ ತಮ್ಮ ಜೀವನವನ್ನು ಒಂದೇ ವರ್ಷದಲ್ಲಿ ಅದೇ ಹೊಗೆ ಹಾಕಿಸಿಕೊಂಡು ಕುಟುಂಬವನ್ನು ಪರದೇಶಿಯನ್ನಾಗಿ ಮಾಡಿ ತಾವು ಗೋಡೆಯ ಭಾವಚಿತ್ರದಲ್ಲಿ ಕಂಗೊಳಿಸುವುದು, ಆದುದರಿಂದ ಮನುಷ್ಯನು ಮಾಡುವ ದುಶ್ಚಟಗಳಿಂದ ಮನೆಯವರಿಗೂ ತೊಂದರೆ, ಹಾಗೆ ಇಡೀ ಕುಟುಂಬ ಆರ್ಥಿಕವಾಗಿ ಹಿಂದುಳಿಯುವುದಕ್ಕೆ ಕಾರಣವಾಗುತ್ತದೆ ಎಂದು ಹೇಳಿದರು. ತಂಬಾಕು ಮುಕ್ತ ಭಾರತದ, ತಂಬಾಕು ಮುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ಈಶ್ವರಿ ವಿಶ್ವವಿದ್ಯಾಲಯದ ಈ ಒಂದು ಕಾರ್ಯಕ್ರಮ ಅತ್ಯಂತ ಮಹತ್ವಪೂರ್ಣವಾದ ಹೆಜ್ಜೆ ಎಂದು ವಿವರಿಸಿದರು.

ತಂಬಾಕಿನ ಈ ಚಟದಿಂದ ಮುಕ್ತಿ ಹೊಂದಲು ರಾಯಚೂರು ಜಿಲ್ಲೆಯ ರಿಮ್ಸ್ ಆಸ್ಪತ್ರೆಯಲ್ಲಿ' ಟಿ.ಸಿ. ಎಸ್. ವಿಶೇಷ ಘಟಕವನ್ನು ಸ್ಥಾಪಿಸಲಾಗಿದ್ದು ತಂಬಾಕಿನಿಂದ ತೊಂದರೆಗೊಳಗಾಗಿರುವ ರಾಯಚೂರು ಜಿಲ್ಲೆಯ ಸರ್ವರೂ ಈ ಕೇಂದ್ರದ ಸದುಪಯೋಗಪಡಿಸಿಕೊಂಡು ತಂಬಾಕು ಚಟದಿಂದ ಮುಕ್ತರಾಗಬೇಕೆಂದು ವಿನಂತಿಸಿದರು.

ಈಶ್ವರಿ ವಿಶ್ವವಿದ್ಯಾಲಯದ ಪ್ರಧಾನ ಸಂಚಾಲಕರಾದ ಸ್ಮಿತಾ ಅಕ್ಕನವರು ಮಾತನಾಡಿ ಚಟಗಳು ಮನುಷ್ಯನನ್ನು ಚಟ್ಟದವರೆಗೆ ಕೊಂಡೊಯ್ಯುತ್ತವೆ, ಇಂತಹ ಚಟಗಳಿಂದ ಮುಕ್ತ ಮಾಡಲು ಭಾರತ ಸರ್ಕಾರ ಹಾಗೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ನಡುವೆ ಆಗಿರುವ ಮೆಮೋರೆಂಡಂ ಆಫ್ ಅಂಡರ್ ಸ್ಟ್ಯಾಂಡಿಂಗ್ ಎಂಬ ವಿವರವನ್ನು ವಿವರಿಸುತ್ತಾ ನಶಾಮುಕ್ತ ಭಾರತದ ಮಾಡಲು ಈಶ್ವರಿಯ ವಿಶ್ವವಿದ್ಯಾಲಯವು "ಮಿಷನ್ ಸ್ಪಂದನ" ಕಾರ್ಯಕ್ರಮದ ಅಡಿಯಲ್ಲಿ ರಾಷ್ಟ್ರಮಟ್ಟದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ವಿವರಗಳನ್ನು ಹಂಚಿಕೊಂಡರು, ಸಮಾಜವನ್ನು ನಶಾ ಮುಕ್ತ ಮಾಡಲು ಪ್ರತಿಯೊಬ್ಬರು ಸಹಕರಿಸಬೇಕು ಎಂದು ವಿನಂತಿಸಿದರು.

ಮನೋಹರ ಪತ್ತಾರ ಜಿಲ್ಲಾ ಮನೋರೋಗ ಹಾಗೂ ಮಾನಸಿಕ ಸ್ವಾಸ್ಥ್ಯ ಅಧಿಕಾರಿಗಳು ಇವರು ಮಾತನಾಡುತ್ತಾ ಮಾನಸಿಕ ಸ್ವಾಸ್ಥ್ಯ ಮತ್ತು ಆಧ್ಯಾತ್ಮಿಕತೆ ಒಂದೇ ನಾಣ್ಯದ ಎರಡು ಮುಖಗಳೆಂದು ವಿವರಿಸಿದರು ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ತೊಂದರೆ ಆದರೂ ಸಮಾಜದ ಸ್ವಾಸ್ಥ್ಯ ಕೆಡುತ್ತದೆ ಎಂದು ಹೇಳಿದರು, ಒಂದು ದೇಶವನ್ನು ಹಾಳು ಮಾಡಲು ಬಾಂಬುಗಳು ಹಾಕುವ ಅವಶ್ಯಕತೆ ಇಲ್ಲ ಸಮಾಜದ ಮಾನವ ಸಂಪತ್ತನ್ನು ಈ ರೀತಿ ದುಶ್ಚಟಗಳಿಗೆ ಬಲಿಯಾಗಿಸಿದರೆ ಆ ದೇಶದ ಸರ್ವನಾಶವಾಗುವುದು ಖಚಿತ ಎಂದು ಹೇಳಿದರು.

ರಿಮ್ಸ್ ಅಬಾರ್ಕ್ ಆಯುಷ್ಮಾನ್ ಭಾರತ ಕರ್ನಾಟಕದ ಡಾ. ಸುಶ್ರಿತ ಎ ನೀಲೋಪಂತ ಮಾತನಾಡಿ ತಾವು ತಮ್ಮ ಜೀವನದಲ್ಲಿ ಸ್ನೇಹಿತರಿಂದ ತಂಬಾಕಿನ ಚಟಗಳಿಗೆ ಬಲಿಯಾಗದೆ ಯಾವ ರೀತಿಯಾಗಿ ನಶಾ ಮುಕ್ತರಾಗಿ ಉಳಿದರು ಎನ್ನುವುದನ್ನು ವಿವರಿಸಿದರು, ಹಾಗೂ ಸಿಗರೇಟ್ ಜೀವನವನ್ನು ಸುಡುತ್ತದೆ ಗುಟುಕ ಜೀವನವನ್ನು ಕರಗಿಸುತ್ತದೆ ಎಂದು ಹೇಳಿದರು.

ಡಾ. ದಂಡಪ್ಪ ಬಿರಾದಾರ ಜಿಲ್ಲಾ ಸಂಚಾಲಕರು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ರಾಯಚೂರು ಮಾತನಾಡಿ ನನ್ನ ಭಾರತ ನಶಮುಕ್ತ ಭಾರತ ನನ್ನ ಕರ್ನಾಟಕ ನಶಾಮುಕ್ತ ಕರ್ನಾಟಕ ನನ್ನ ಜಿಲ್ಲೆ ನಶಾಮುಕ್ತ ಜಿಲ್ಲೆ ಎನ್ನುವ ಕಾರ್ಯದಲ್ಲಿ ಪ್ರತಿಯೊಬ್ಬರು ಕಾರ್ಯವನ್ನ ನಿರ್ವಹಿಸಬೇಕು ಸಿಗರೇಟ್ ಗುಟುಗ ಪಾನ್ ಪರಾಕ್ ಮಧ್ಯಪಾನ ಸೇವನಿಗೆ ಯುವಕರು ಮಾರುಹೋಗುತ್ತಿರುವುದು ವಿಷಾದನೀಯ ಸಂಗತಿ ಯುವಕರನ್ನು ದುಶ್ಚಟಗಳಿಂದ ಗಳಿಂದ ದೂರ ಮಾಡಲು ಬ್ರಹ್ಮಕುಮಾರಿ ಸಂಸ್ಥೆ ನಿರಂತರವಾಗಿ ಇಂತ ಕಾರ್ಯಗಳನ್ನ ಮಾಡುತ್ತಿರುವುದು ಸಂತೋಷದ ಸಂಗತಿ ನಶಾ ಮುಕ್ತರಾಗುವುದರ ಬಗ್ಗೆ ಸರ್ವಜ್ಞನ ವಚನಗಳು ದಾಸರ ವಚನಗಳ ಮೂಲಕ ತಿಳಿಸಿಕೊಟ್ಟರು.

ಇದೇ ಸಂದರ್ಭದಲ್ಲಿ ವಿಶ್ವ ತಂಬಾಕು ನಿಷೇದದ ಬಗ್ಗೆ ಪ್ರಜಾಪಿತಾ ಬ್ರಹ್ಮಕುಮಾರಿ ವಿಶ್ವ ವಿದ್ಯಾಲಯವು ಒಂದು ವರ್ಷದ ಕಾರ್ಯಕ್ರಮಗಳನ್ನು ಹಾಕಿಕೊಂಡ ವಿವರದ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪ್ರಜಾಪಿತಾ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸರ್ವ ಪರಿವಾರದವರು ಉಪಸ್ಥಿತರಿದ್ದರು.

## 2026-27 ನೇ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಹಾಗೂ ಪಾಲಕ-ಪೋಷಕರ ಮಹಾಸಭೆ ಯಶಸ್ವಿ




ಧೈರ್ಯದ ದಾರಿ

**ಸಿರವಾರ:**ಸರ್ಕಾರಿ ಮಾದ 'ರಿಯ ಹಿರಿಯ ಪ್ರಾಥಮಿಕ ಶಾಲೆ, ಕೆ. ಗುಡದಿನ್ನಿಯಲ್ಲಿ 2026-27 ನೇ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋ ತ್ಸವ ಹಾಗೂ ಪಾಲಕ-ಪೋಷಕ 'ರ ಮಹಾಸಭೆಯನ್ನು ಸಂಭ್ರ ಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಹೂಗುಚ್ಚ ನೀಡಿ ಆತ್ಮೀಯವಾಗಿ ಸ್ವಾಗತಿಸಲಾಯಿತು. ಜೊತೆಗೆ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳು ಹಾಗೂ ಶಾಲಾ ಬಟ್ಟೆಗಳನ್ನು ವಿತರಿಸಲಾಯಿತು. ಶಾಲೆಯ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಈ ಸಂದರ್ಭದಲ್ಲಿ ಪಿಯುಸಿ ದ್ವಿತೀಯ ವರ್ಷದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ನಮ್ಮ ಶಾಲೆಯ ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವಿದ್ಯಾರ್ಥಿಗಳ ಸಾಧನೆಯನ್ನು ಶಾಲಾ ಶಿಕ್ಷಕರು ಹಾಗೂ ಪಾಲಕರು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ನಿಂಗಪ್ಪ, ಉಪಾಧ್ಯಕ್ಷರಾದ ಶ್ರೀಮತಿ ಗಂಗಮ್ಮ ಗಂಡ ಮಹೇಶ್, ಸದಸ್ಯರಾದ ಪೀರ್ ಸಾಬ್, ಶಿವಾನಂದ, ಸಣ್ಣ ಹುಸೇನಿ ಉಪಸ್ಥಿತರಿದ್ದರು.ಹಾಗೂ ಶಾಲೆಯ ಮುಖ್ಯ ಗುರುಗಳಾದ ಶ್ರೀ ತಿರುಮಲ ಯಾದವ್ ಸರ್, ಶ್ರೀ ಮೌನೇಶ್ ಸರ್, ಶ್ರೀಮತಿ ಸ್ಫೂರ್ತಿ ಹಾಗೂ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಸಿರವಾರ ಅಧ್ಯಕ್ಷರಾದ ಎಚ್.ಎಂ. ಇಸಾಕ್ ಅವರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಒಂದರಿಂದ ಎಂಟನೇ ತರಗತಿ ವರೆಗೆ ಇದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಇದೀಗ ಪಿಯುಸಿ ದ್ವಿತೀಯ ವರ್ಷದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದ ಹಳೆಯ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಸಿಕೊಡಲಾಯಿತು. ಕಾರ್ಯಕ್ರಮವು ವಿದ್ಯಾರ್ಥಿಗಳು, ಪಾಲಕರು ಹಾಗೂ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಯಶಸ್ವಿಯಾಗಿ ನೆರವೇರಿತು.

# "ಸಲಾವುದ್ದಿನ್ ಮನೆಯೇ ಪಕ್ಷಿಧಾಮ ಅಶಕ್ತ ಪಕ್ಷಿಗೆ ಕೈತುತ್ತಿನ ಪ್ರೀತಿ"

ರಾತ್ರಿ ಮನೆ ಬಾಗಿಲು, ಕಿಟಕಿಗಳನ್ನು ಮುಚ್ಚಿಕೊಂಡು ಮಲಗಿದ್ದ ಸಲಾವುದ್ದೀನ್ ಅವರಿಗೆ ಸಣ್ಣದೊಂದು ಶಬ್ದ ಕೇಳಿಸಿತು. ಎದ್ದು ನೋಡಿದಾಗ ಕಿಟಕಿಯ ಗಾಜಿಗೆ ಚಿಕ್ಕ ಗುಬ್ಬಿಗಳು ಕುಟುಕುತ್ತಿದ್ದವು. ಮನೆಯೊಳಗೆ ಗೂಡು ಕಟ್ಟಿದ್ದ ಅವುಗಳು ಒಳಗೆ ಬರಲಾಗದೆ ಹೊರಗೇ ಉಳಿದಿದ್ದವು. ಆ ಕ್ಷಣದಲ್ಲಿ ಸಲಾವುದ್ದೀನ್ ಅವರ ಮನಸ್ಸು ಕರಗಿತು. 'ಈ ಚಿಕ್ಕ ಜೀವಿಗಳಿಗೆ ಆಶ್ರಯ ಕೊಡದೇ ನಾವು ಮನುಷ್ಯತ್ವದ ಬಗ್ಗೆ ಹೇಗೆ ಮಾತನಾಡಬಹುದು?' ಎಂಬ ಪ್ರಶ್ನೆ ಅವರನ್ನು ಕಾಡಿತು. ಆ ಒಂದು ಘಟನೆ ಅವರ ಬದುಕಿನ ದಿಕ್ಕನ್ನೇ ಬದಲಿಸಿತು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಗುತ್ತಿಗೆದಾರ ಸಲಾವುದ್ದೀನ್ ಕಳೆದ ಹತ್ತು ವರ್ಷಗಳಿಂದ ಪಕ್ಷಿಗಳ ಆರೈಕೆಯನ್ನು ಬದುಕಿನ ಭಾಗವನ್ನಾಗಿ ಮಾಡಿಕೊಂಡಿದ್ದಾರೆ. ಜನರ ಪಾಲಿಗೆ ಅವರು ಈಗ 'ಪಕ್ಷಿಪ್ರೇಮಿ ಸಲಾವುದ್ದೀನ್' ಎಂದೇ ಪರಿಚಿತರು. ಅವರ ಮನೆಯಂಗಳಕ್ಕೆ ಕಾಲಿಟ್ಟರೆ ಅದು ಸಾಮಾನ್ಯ ಮನೆ ಎನ್ನಿಸುವುದಿಲ್ಲ. ಪೈಪು, ಗಡಿಗೆಗಳಿಂದ ಮಾಡಿರುವ ಕೃತಕ ಗೂಡುಗಳು, ನೀರಿನ ಪಾತ್ರೆಗಳು, ಕಾಳು-ಕಡಿಯ ಪಾತ್ರೆಗಳು ಎಲ್ಲೆಲ್ಲೂ ಕಾಣುತ್ತವೆ. ಗುಬ್ಬಿ, ಮೈನಾ, ಬೆಳ್ಳಕ್ಕಿ, ಕಾಗೆ ಸೇರಿದಂತೆ ಹಲವು ಪಕ್ಷಿಗಳು ಅಲ್ಲಿ ಸ್ವಚ್ಛಂದವಾಗಿ ಹಾರುತ್ತಿರುತ್ತವೆ. ಪಕ್ಷಿಗಳ ಚಿಲಿಪಿಲಿ ಧ್ವನಿಯಿಂದ ಮನೆಯಂಗಳ ಸದಾ ಕಳೆಗಟ್ಟಿರುತ್ತದೆ. ಬೆಳಗಿನ ಜಾವ ಪಕ್ಷಿಗಳ ಕಲರವದೊಂದಿಗೇ ಮನೆಯವರ ದಿನ ಆರಂಭವಾಗುತ್ತದೆ.

ಕೆಲವೊಮ್ಮೆ ಪಕ್ಷಿಗಳು ಮನೆಯೊಳಗೇ ಬಂದು ಕಿಟಕಿಯ ಮೇಲೆ, ಬಾಗಿಲಿನ ಅಂಚಿನಲ್ಲಿ ಕುಳಿತುಕೊಳ್ಳುತ್ತವೆ. ಮನೆಯವರು ಅವುಗಳನ್ನು ಓಡಿಸುವುದಿಲ್ಲ. ಬದಲಿಗೆ ಮನೆಯ ಸದಸ್ಯರಂತೆ ಮಾತನಾಡಿಸುತ್ತಾರೆ. ಹೀಗೆ ಮನುಷ್ಯರು ಮತ್ತು ಪಕ್ಷಿಗಳ ನಡುವೆ ಒಂದು ಅಪರೂಪದ ಬಾಂಧವ್ಯ ಅಲ್ಲಿ ಬೆಳೆದಿದೆ. ಸಲಾವುದ್ದೀನ್ ಅವರಿಗೆ ಪಕ್ಷಿಗಳು ಕೇವಲ ಜೀವಿಗಳಲ್ಲ; ಮನೆಯ ಸದಸ್ಯರೇ ಆಗಿವೆ. ಪ್ರತಿದಿನ ಬೆಳಗ್ಗೆ ಎದ್ದ ಕೂಡಲೇ ಅವುಗಳಿಗೆ ನೀರು ಇಡುವುದು, ಕಾಳು ಹಾಕುವುದು ಅವರ ಮೊದಲ ಕೆಲಸ. ಯಾವ ಪಾತ್ರೆಯಲ್ಲಿ ನೀರು ಕಡಿಮೆಯಾಗಿದೆ, ಯಾವ ಗೂಡಿನಲ್ಲಿ ಹೊಸ ಪಕ್ಷಿ ಬಂದಿದೆ ಎಂಬುದನ್ನೂ ಅವರು ಗಮನಿಸುತ್ತಾರೆ. ಬೇಸಿಗೆಯ ಬಿಸಿಲಿನಲ್ಲಿ ನೀರಿಗಾಗಿ ಹಾತೊರೆಯುವ ಹಕ್ಕಿಗಳನ್ನು ನೋಡಿದಾಗ ಅವರಿಗೆ ನೋವಾಗುತ್ತದೆ. 'ಮನುಷ್ಯರಿಗೆ ದಾಹವಾದರೆ ಕೇಳಿಕೊಂಡು ನೀರು ಕುಡಿಯಬಹುದು. ಆದರೆ ಈ ಮೂಕ ಜೀವಿಗಳು ಯಾರನ್ನು ಕೇಳಬೇಕು?' ಎಂದು ಅವರು ಪ್ರಶ್ನಿಸುತ್ತಾರೆ.

ಸಲಾವುದ್ದೀನ್ ಅವರ ಈ ಕಾರ್ಯಕ್ಕೆ ಕುಟುಂಬದ ಬೆಂಬಲವೂ ದೊಡ್ಡ ಶಕ್ತಿ. ಪತ್ನಿ, ಮಕ್ಕಳು ಪಕ್ಷಿಗಳಿಗೆ ಆಹಾರ ಹಾಕುವುದರಿಂದ ಹಿಡಿದು ಗಾಯಗೊಂಡ ಪಕ್ಷಿಗಳ ಆರೈಕೆವರೆಗೂ ಎಲ್ಲ ಕೆಲಸಗಳಲ್ಲಿ ಕೈಜೋಡಿಸುತ್ತಾರೆ. ಮನೆಯವರು ಹೊರಗಡೆ ಹೋಗುವ ಸಂದರ್ಭದಲ್ಲೂ ಮೊದಲು ಪಕ್ಷಿಗಳಿಗೆ ನೀರು-ಆಹಾರದ ವ್ಯವಸ್ಥೆ ಮಾಡಿಕೊಂಡೇ ಹೋಗುತ್ತಾರೆ. 'ಕುಟುಂಬದ ಸಹಕಾರ ಇರದಿದ್ದರೆ ಇಷ್ಟೆಲ್ಲ ಮಾಡಲು ಸಾಧ್ಯವಾಗುತ್ತಿರಲಿಲ್ಲ' ಎಂದು ಅವರು ಹೇಳುತ್ತಾರೆ. ಅವರ ಸ್ನೇಹಿತ ಜಗನ್ನಾಥ ಚೌದರಿ ಸಹ ಸದಾ ಜೊತೆಗಿದ್ದು ನೆರವಾಗುತ್ತಿದ್ದಾರೆ.

ಸಲಾವುದ್ದೀನ್ ಅವರ ಮನೆ ಈಗ ಪಕ್ಷಿಪ್ರೇಮಿಗಳ ಆಕರ್ಷಣೆಯ ಕೇಂದ್ರವಾಗಿದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಪರಿಸರಾಸಕ್ತರು ತಂಡಗಳಾಗಿ ಬಂದು ಅವರ ಕಾರ್ಯವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಪಕ್ಷಿಗಳಿಗೆ ಅವರು ಮಾಡಿರುವ ಗೂಡುಗಳು, ನೀರಿನ ವ್ಯವಸ್ಥೆ, ಆರೈಕೆಯ ವಿಧಾನಗಳನ್ನು ನೋಡಿ ಹಲವರು ತಮ್ಮ ಮನೆಯಲ್ಲೂ ಇದೇ ರೀತಿಯ ಪ್ರಯತ್ನ ಆರಂಭಿಸಿದ್ದಾರೆ.

ಸ್ವತಃ ಸಲಾವುದ್ದೀನ್ ವಿವಿಧ ಕಾರ್ಯಕ್ರಮಗಳಿಗೆ ತೆರಳಿ ಪಕ್ಷಿ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಬೇಸಿಗೆಯಲ್ಲಿ ಮನೆಯಂಗಳದಲ್ಲಿ ಒಂದು ಪಾತ್ರೆ ನೀರು ಇಟ್ಟರೂ ಸಾಕು, ಅದು ಒಂದು ಪಕ್ಷಿಯ ಜೀವ ಉಳಿಸಬಹುದು ಎಂಬ ಸಂದೇಶವನ್ನು ಅವರು ಜನರಿಗೆ ನೀಡುತ್ತಿದ್ದಾರೆ. ಪಕ್ಷಿಗಳಿಗೆ ನೀರುಣಿಸಲು ಬಳಸುವ ವಿಶೇಷ ಬಾಟಲಿಗಳನ್ನು ಉಚಿತವಾಗಿ ಹಂಚಿ, ಕಡಿಮೆ ವೆಚ್ಚದಲ್ಲಿ ಅವುಗಳನ್ನು ಹೇಗೆ ಅರಿಸಬೇಕು ಎಂಬುದನ್ನೂ ಕಲಿಸುತ್ತಿದ್ದಾರೆ.

"ಪಕ್ಷಿಗಳಿಗೆ ದೊಡ್ಡ ಸಹಾಯ ಮಾಡಬೇಕೆಂದಿಲ್ಲ. ಒಂದು ಚಿಕ್ಕ ಪಾತ್ರೆಯಲ್ಲಿ ನೀರು




ಇಟ್ಟರೂ ಸಾಕು' ಎಂಬುದು ಅವರ ಸರಳ ಮನವಿಯಾಗಿದೆ. ಒಮ್ಮೆ ಮನೆಯಂಗಳದಲ್ಲೇ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಗುಬ್ಬಿಗಳು ಇಂದು ಅಪರೂಪವಾಗುತ್ತಿವೆ. ಮರಗಳ ನಾಶ, ವಾಯುಮಾಲಿನ್ಯ, ಮೊಬೈಲ್ ವಿಕಿರಣ, ರಾಸಾಯನಿಕ ಬಳಕೆ-ಇವೆಲ್ಲವೂ ಪಕ್ಷಿಗಳ ಬದುಕಿಗೆ ದೊಡ್ಡ ಅಪಾಯವಾಗಿವೆ.

ಈ ನಡುವೆ ಸಲಾವುದ್ದೀನ್ ಅವರಂತಹವರು ಕೇವಲ ಪಕ್ಷಿಗಳನ್ನು ಉಳಿಸುತ್ತಿಲ್ಲ; ಮಾನವೀಯತೆಯನ್ನೂ ಜೀವಂತವಾಗಿರಿಸುತ್ತಿದ್ದಾರೆ. ಒಂದು ಪಾತ್ರೆ ನೀರು, ಒಂದು ಮುಷ್ಟಿ ಕಾಳು ಮತ್ತು ಸ್ವಲ್ಪ ಮಮತೆ ಇದ್ದರೆ ಸಾಕು, ಮೂಕ ಜೀವಿಗಳ ಬದುಕಿನಲ್ಲಿ ಆಶೆಯಾಗಬಹುದು ಎಂಬುದನ್ನು ಅವರು ತಮ್ಮ ಬದುಕಿನ ಮೂಲಕ ಸಾಬೀತುಪಡಿಸಿದ್ದಾರೆ.

# ಜ್ಞಾನ ಕೊಡುವ ಸಾತ್ವಿಕ ಪುರಾಣ ಭಾಗವತ



**ಸತ್ತೂರು,ಜೂ1**: ಭಾಗವತ 12 ಸ್ಕಂದಗಳಿಂದ,18,000 ಶ್ಲೋಕಗಳಿಂದ ಯುಕ್ತನಾದ ಈ ಗ್ರಂಥ, ದೇವರ ಬಗ್ಗೆ ಸರಿಯಾದ ಜ್ಞಾನ ಕೊಡುವ ಸಾತ್ವಿಕ ಪುರಾಣ. ಈ ಲೋಕದ ಅಶಾಶ್ವತೆಯನ್ನು ತಿಳಿಸಿ, ವೈರಾಗದತ್ತ ನಮ್ಮನ್ನೆಲ್ಲ ಕರೆದೊಯ್ಯುತ್ತದೆ, ಪರಮಾತ್ಮನಲ್ಲಿ ಭಕ್ತಿ ಸ್ಥಿರವಾಗಿ ನಿಲ್ಲುತ್ತದೆ ಎಂದು ಡಾ. ಭೀಮಸೇನಾಚಾರ್ಯ ಮಳಗಿಯವರು ತಿಳಿಸಿದರು.ಸತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ಅಧಿಕ ಮಾಸದಲ್ಲಿ, ಎರಡನೇ ಭಾಗವತ ಸಪ್ತಾಹದ ಮಂಗಳೋತ್ಸವದಲ್ಲಿ ಭಾಗವಹಿಸಿ ಮಾತನಾಡುತ್ತಾ, ಶ್ರೀ ವೇದವ್ಯಾಸ ದೇವರಿಂದ ರಚಿತವಾದ ಈ ಭಾಗವತ, ರಚನೆಯ ಕ್ರಮದಲ್ಲಿಯೂ ಕೊನೆಯ ಪುರಾಣವಾಗಿದ್ದು, ಸಮಸ್ತ ಜೀವ ರಾಶಿಗಳಿಗೆ ಭಗವಂತನ ಬಗ್ಗೆ ತಿಳಿಸಿಕೊಡುವ, ಸುಂದರವಾಗಿ ನಿರೂಪಿಸುವ ಹಾಗೂ ಎಲ್ಲ ಪುರಾಣಗಳ ಸಾರ ಸಂಗ್ರಹವು ಇದ್ದ ಕಾರಣ, ಪುರಾಣಗಳ ರಾಜ ಶ್ರೀಮದ್ ಭಾಗವತ ಎಂದು ಹೇಳಲ್ಪಟ್ಟಿದೆ. ಈ ಗ್ರಂಥದ ಪಾರಾಯಣ, ಶ್ರವಣ, ಮನನ ಮುಂತಾದವುಗಳಿಂದ ಶ್ರೀ ಹರಿಯ ವಿಶೇಷ ಅನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂದೇಹವಿಲ್ಲವೆಂದು, ಲೌಕಿಕ ಉದಾಹರಣೆಗಳೊಂದಿಗೆ ಸ್ವಾರಸ್ಯಕರವಾಗಿ ತಿಳಿಸಿಕೊಟ್ಟರು.

ಈ ಕಾರ್ಯಕ್ರಮದ ಪೂರ್ವದಲ್ಲಿ ಬಳಗದ ಸದಸ್ಯರಿಂದ ಶ್ರೀ ಹರಿ ವಾಯು ಗುರುಗಳ ಸ್ತೋತ್ರಗಳ ಪಾರಾಯಣ ಮತ್ತು ನಾರಾಯಣಿ ಭಜನಾ ಮಂಡಳಿ ಅವರಿಂದ 33 ತಾರತಮ್ಯ ದೇವರನಾಮಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಕೃಷ್ಣ ಹುನಗುಂದ, ರಘೋತ್ತಮ ಅವಧಾನಿ, ಕೃಷ್ಣ ಹುನಗುಂದ, ಡಾ. ಶ್ರೀನಾಥ, ಗಿರೀಶ್ ಶಿರೋಳ, ಡಾ. ರವಿ ದುಮ್ಮವಾಡ, ವಿಠಲ ಅಂಬೇಕರ, ಎಸ್. ವಿ. ಪಟ್ಟಣಕೋಡಿ ,ಸಂಜೀವ ಗೋಳಸಂಗಿ, ಪಾಂಡುರಂಗ ಕುಲಕರ್ಣಿ,ಎಲ್ .ವಿ. ಜೋಶಿ, ವೆಂಕಟೇಶ ಶಿರೋಳ, ಹನುಮಂತ ಪುರಾಣಿಕ, ವಿಲಾಸ ಸಬನೀಸ, ವಿನಾಯಕ ಗುರುನಾಥ ಸರ್ದೇಶ್ಮುಖ, ಸಂಜೀವ್ ಜೋಶಿ, ವಿಶ್ವನಾಥ ಕೆ, ಕೇಶವ ಕುಲಕರ್ಣಿ, ಡಿಕೆ ಜೋಶಿ, ಪ್ರಕಾಶ ದೇಸಾಯಿ, ಆನಂದ ದೇಶಪಾಂಡೆ, ಬಹದ್ದೂರ ದೇಸಾಯಿ, ಅನಿಲ ದೇಶಪಾಂಡೆ, ನಾಗೇಶ ನರಸಾಪುರ, ಬದ್ರಿನಾಥ ಬೆಟಗೇರಿ ಮುಂತಾದವರು ಉಪಸ್ಥಿತರಿದ್ದರು.

# ಕಮಕನೂರಗೆ ಪೂರ್ಣಾವಧಿಯ ಎಂಎಲ್‌ಸಿ ಮಾಡಲು ಡಿಗ್ಗಿ ಮನವಿ

**ಕಲಬುರಗಿ,ಜೂ.1–** ಹಿಂದುಳಿದ ಕೋಲಿ ಸಮಾಜದ ಪ್ರಭಾವಿ ನಾಯಕರಾಗಿರುವ ತಿಪ್ಪಣ್ಣಪ್ಪ ಕಮಕನೂರ ಅವರನ್ನು ಪೂರ್ಣಾವಧಿಗಾಗಿ ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡುವಂತೆ ಕಲ್ಯಾಣ ಕರ್ನಾಟಕ ಕೋಲಿ (ಗಂಗಾಮತ) ಸಮಾಜದ ಅಧ್ಯಕ್ಷ ಅಮೃತ ಎಚ್.ಡಿಗ್ಗಿ ಅವರು ಮನವಿ ಮಾಡಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಿನ್ನೆ ಭಾನುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಕುರಿತು ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ನಿಷ್ಠವಂತ ಕಾರ್ಯಕರ್ತ ಮತ್ತು ಮುಖಂಡರಾಗಿ ಹಲವು ದಶಕಗಳ ಕಾಲ ಕೆಲಸ ಮಾಡಿರುವ ಅವರು, ಹಿಂದುಳಿದ ಕೋಲಿ ಸಮಾಜದ ಧ್ವನಿಯಾಗಿ ಕಮಾಜದ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದಾರೆ. ಅವರನ್ನು ಪೂರ್ಣಾವಧಿಯ ಆರು ವರ್ಷದ ಎಂ.ಎಲ್.ಸಿ ಸ್ಥಾನಕ್ಕೆ ನೇಮಕ ಮಾಡುವ ಮೂಲಕ ಕೋಲಿ ಸಮಾಜಕ್ಕೆ ಸಮಾಜಿಕ ನ್ಯಾಯ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ತಿಪ್ಪಣ್ಣಪ್ಪ ಕಮಕನೂರ ಅವರು, ತಮ್ಮ ಅಲ್ಪವಧಿಯ ಎಂ.ಎಲ್.ಸಿ ಅಧಿಕಾರವಧಿಯಲ್ಲಿ ಜನಪರ ಸೇವೆ ಸಲ್ಲಿಸಿದ್ದಾರೆ. ವಿಷೇಶವಾಗಿ ಕೋಲಿ ಸಮಾಜದ ಸಂಘಟನೆ ಮತ್ತು ಐಕ್ಯಾತೆಗಾಗಿ ದುಡಿಯುತ್ತಿದ್ದಾರೆ. ರಾಜಧಾನಿ ಬೆಂಗಳೂರು ಮತ್ತು ಕಲಬುರಗಿಯಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆ ಪ್ರತಿಷ್ಠಾಪನೆಗಾಗಿ, ಸಮಾಜಕ್ಕೆ ಎಸ್ಟಿ ಸ್ಥಾನಮಾನ, ಪ್ರಾಧಿಕಾರ ರಚನೆ ಹೀಗೆ ಹತ್ತು ಹಲವು ಪ್ರಮುಖ ಬೇಡಿಕೆಗಳಿಗೆ ಸ್ಪಂಧಿಸುವ ಮೂಲಕ ಸಮಾಜದ ಮೆಚ್ಚುಗೆಯ ನಾಯಕರಾಗಿದ್ದಾರೆ. ಅವರನ್ನು ಎಂಎಲ್.ಸಿ ಮಾಡುವಂತೆ ಕಾಂಗ್ರೆಸ್ ಪಕ್ಷದ ವರಿಷ್ಟರಿಗೆ ಡಿಗ್ಗಿ ಅವರು ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಅರ್ಜುನ ಜಮಾದಾರ, ಸಂಗಮನಾಥ ಕಣ್ಣಿ, ಸುಖದೇವ ಕೋಗನೂರ, ರಮೇಶ ಎಸ್.ಬಿದನೂರ, ರಾಯಪ್ಪ ಹೊನಗುಂಟಿ, ದತ್ತು ಹೊನ್ನಳ್ಳಿ, ಬಸವರಾಜ ಬಳೂರ್ಗಿ ಸೇರಿದಂತೆ ಹಲವರಿದ್ದರು.

# ಹೂಮಳೆ ಸ್ವಾಗತದೊಂದಿಗೆ ಶಾಲೆಗೆ ಮರಳಿದ ವಿದ್ಯಾರ್ಥಿಗಳುಚಿರಂಜೀವಿ ಶಾಲೆಯಲ್ಲಿ ಸಂಭ್ರಮದ ಆರಂಭೋತ್ಸವ

**ಯಾದಗಿರಿ:ಜೂ.1**: ನಗರದ ಚಿರಂಜೀವಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ** 2026-27ನೇ ಶೈಕ್ಷಣಿಕ ವರ್ಷದ ಆರಂಭೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಬೇಸಿಗೆ ರಜೆ ಬಳಿಕ ಶಾಲೆಗೆ ಮರಳಿದ ವಿದ್ಯಾರ್ಥಿಗಳಿಗೆ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ಆಡಳಿತ ಮಂಡಳಿಯ ಸದಸ್ಯರು ಹೂಮಳೆ ಸುರಿಸಿ ಆತ್ಮೀಯ ಸ್ವಾಗತ ಕೋರಿದರು.

ಶಾಲಾ ಆವರಣವು ಹಬ್ಬದ ವಾತಾವರಣದಿಂದ ಕಂಗೊಳಿಸುತ್ತಿದ್ದು, ವಿದ್ಯಾರ್ಥಿಗಳು ಸಂತಸ, ಉತ್ಸಾಹ ಮತ್ತು ಹೊಸ ಕನಸುಗಳೊಂದಿಗೆ ಶಾಲೆಗೆ ಆಗಮಿಸಿದರು. ಶಾಲೆಯ ಮುಖ್ಯಗುರು ಜೈಪಾಲ್ ಎಲಿಷ್ ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ಶಿಸ್ತು, ಪರಿಶ್ರಮ ಹಾಗೂ ಗುಣಮಟ್ಟದ ಶಿಕ್ಷಣದ ಮಹತ್ವವನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಹಾಗೂ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ವೈಸ್ ಚೇರ್ಮನ್ ಎಸ್. ನಂದಕುಮಾರ್, ಜಿಲ್ಲಾ ಮೇಲ್ವಿಚಾರಕರು ವಿದ್ಯಾರ್ಥಿಗಳಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಅವರ ಶೈಕ್ಷಣಿಕ ಜೀವನ ಉಜ್ವಲವಾಗಿರಲೆಂದು ಹಾರೈಸಿದರು. ಅಲ್ಲದೆ ವಿದ್ಯಾರ್ಥಿಗಳಿಗೆ ಉತ್ತಮ ನಡತೆ, ಶಿಸ್ತು, ಸಮಯಪಾಲನೆ, ಕಠಿಣ ಪರಿಶ್ರಮ ಹಾಗೂ ಜೀವನದಲ್ಲಿ ಉನ್ನತ




ಗುರಿಗಳನ್ನು ಸಾಧಿಸುವ ಕುರಿತು ಅಮೂಲ್ಯ ಸಲಹೆಗಳನ್ನು ನೀಡಿ ಪ್ರೇರಣಾದಾಯಕ ಸಂದೇಶ ನೀಡಿದರು.

ಇನ್ನು ಸಭಾಪಾಲಕರಾದ ಜಾನ್ ವೆಸ್ಲಿ, ಸ್ಟಾನ್ ಲೀ ಸ್ಟೀಫನ್, ಜಯಶ್ರೀ, ವಿಕ್ಟೋರಿಯಾ ಫ್ಲಾರೆನ್ಸ್, ಪ್ರಕಾಶ್, ಹನುಮಂತರಾಯ, ಮಂಜುಳಾ, ಸುನಿತಾ, ಜಾಸ್ಮಿನ್, ಯೇಸುರಾಜ ಯಡಹಳ್ಳಿ ಸೇರಿದಂತೆ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಸಿ ನೆಡುವಿಕೆ, ಪ್ರಬಂಧ ಹಾಗೂ ರಸಪ್ರಶ್ನೆ ಸ್ಪರ್ಧೆ ಆಯೋಜನೆ: ಮಲ್ಲಿಕಾರ್ಜುನ ಮೇಟಿ




**ಯಾದಗಿರಿ:ಜೂ.1:** ಬಿಸಿಲಿನ ನಾಡು ಎಂದೇ ಖ್ಯಾತಿ ಪಡೆದಿರುವ ಈ ಭಾಗದ ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆ ಕುರಿತು ಅರಿವು ಮತ್ತು ಜಾಗೃತಿ ಮೂಡಿಸುವ ಉದ್ದೇಶದಿಂದ ಜೂನ್ 5ರಂದು ನಡೆಯಲಿರುವ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಡಿಡಿಯು ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ಮಲ್ಲಿಕಾರ್ಜುನ ಮೇಟಿ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾದಗಿರಿ, ಶಹಾಪುರ, ಕಲಬುರಗಿ, ದೋರನಹಳ್ಳಿ, ವಡಗೇರಾ ಹಾಗೂ ಸೈದಾಪುರದಲ್ಲಿರುವ ಡಿಡಿಯು ಶಾಲೆಗಳಲ್ಲಿ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ ಹಾಗೂ ಅತಿ ಹೆಚ್ಚು ಸಸಿಗಳನ್ನು ನೆಡುವ ವಿಶೇಷ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

5ರಿಂದ 10ನೇ ತರಗತಿ ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿದ್ದು, ಪ್ರತಿ ಶಾಲೆಯಿಂದ ಕನಿಷ್ಠ ಐದು ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಪರಿಸರದ ಮಹತ್ವ, ಹಸಿರು ಸಂರಕ್ಷಣೆ ಮತ್ತು ಪ್ರಕೃತಿ ಪ್ರೇಮವನ್ನು ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಸಸಿ ನೆಡುವಿಕೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ 2,500 ಹಾಗೂ ದ್ವಿತೀಯ ಬಹುಮಾನ 1,100, ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ?2,500 ಹಾಗೂ ದ್ವಿತೀಯ ಬಹುಮಾನ ?1,100, ರಸಪ್ರಶ್ನೆ ಸ್ಪರ್ಧೆಯಲ್ಲಿಯೂ ಪ್ರಥಮ ಬಹುಮಾನ 2,500 ಹಾಗೂ ದ್ವಿತೀಯ ಬಹುಮಾನ 1,100 ನಿಗದಿಪಡಿಸಲಾಗಿದೆ ಎಂದು ವಿವರಿಸಿದರು.

ಸಸಿ ನೆಡುವಿಕೆ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಾವು ನೆಟ್ಟ ಸಸಿಯ ಜಿಪಿಎಸ್ ಮಾಹಿತಿಯೊಂದಿಗೆ ಭಾವಚಿತ್ರವನ್ನು ತಮ್ಮ ಶಾಲೆಯ ವಾಟ್ಸಾಪ್ ಸಂಖ್ಯೆಗೆ ಕಳುಹಿಸಬೇಕು. ಸಂಸ್ಥೆಯ ಅಧ್ಯಕ್ಷ ಡಾ. ಭೀಮಣ್ಣ ಮೇಟಿ ಅವರ ಮಾರ್ಗದರ್ಶನದಂತೆ ವಿದ್ಯಾರ್ಥಿಗಳಲ್ಲಿ ಪರಿಸರ ಕಾಳಜಿ ಮತ್ತು ಹಸಿರು ಸಂರಕ್ಷಣೆಯ ಮಹತ್ವದ ಕುರಿತು ಅರಿವು ಮೂಡಿಸಲು ಈ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಮೇಟಿ ತಿಳಿಸಿದರು.

ಹೆಚ್ಚಿನ ಮಾಹಿತಿಗಾಗಿ ಯಾದಗಿರಿ 9902035765, ಶಹಾಪುರ 9611839522, ದೋರನಹಳ್ಳಿ 9108391969, ವಡಗೇರಾ 9972012066, ಕಲಬುರಗಿ 9945060569 ಹಾಗೂ ಸೈದಾಪುರ  9731276456 ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದಾಗಿದೆ.

ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಂಸ್ಥೆಯ ಬೋಧಕರಾದ ಬಬೀನ್ ರಾಜ್, ಗೋಪಾಲಕೃಷ್ಣ, ವೆಂಕಟೇಶ ಪೂಜಾರಿ ಹಾಗೂ ರಾಜಶೇಖರ ಹಾದಿಮನಿ ಉಪಸ್ಥಿತರಿದ್ದರು

# ಬಿ.ಜೆ.ಪಿ. ಜಿಲ್ಲಾ ಕಾರ್ಯಾಲಯದಲ್ಲಿ ಅಹಿಲ್ಯಬಾಯಿ ಹೊಳ್ಕರ್ ಜಯಂತಿ ಆಚರಣೆ




**ಬೀದರ:ಜೂ.1:** ಅಹಿಲ್ಯಬಾಯಿ ಹೊಳ್ಕರ್ ಜಯಂತಿ ಆಚರಣೆ ಜಯಂತ್ಯೋತ್ಸವನ್ನು ಭಾರತೀಯ ಜನತಾ ಪಕ್ಷದ ಜಿಲ್ಲಾ ಕಾರ್ಯಾಲಯ ಬೀದರನಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಹಿಲ್ಯಬಾಯಿ ಹೊಳ್ಕರ್‌ವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಲಾಯಿತು. ಬಿ.ಜೆ.ಪಿ. ಜಿಲ್ಲಾಧ್ಯಕ್ಷರಾದ ಶ್ರೀ ಸೋಮನಾಥ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪ ಔರಾದೆ, ನಗರ ಘಟಕದ ಅಧ್ಯಕ್ಷ ಶಶಿಧರ ಹೊಸಳ್ಳಿ,ಬಾಬುರಾವ ಕಾರುಬಾರಿ, ವೀರು ದಿಗ್ವಾಲ್, ಗೋಪಾಲ ಕಕಡಾಲ್ ಶ್ರೀಮತಿ ಶಂಕುತಲಾ ಬೆಲ್ದಾಳೆ, ಉಲ್ಲಾಸಿನಿ ಮುದಾಳೆ , ಜಿಲ್ಲಾ ಮಾಧ್ಯಮ ಘಟಕದ ಸಂಚಾಲಕರಾದ ಶ್ರೀನಿವಾಸ ಚೌದರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವರ್ಷಾಂತ್ಯಕ್ಕೆ ತಾಲ್ಲೂಕಿನ 105 ಕೆರೆಗಳಿಗೆ ಎತ್ತಿನಹೊಳೆ ನೀರು: ಶಾಸಕ ಷಡಕ್ಷರಿ



**ತಿಪಟೂರು, ಜೂ. 1–** ವರ್ಷಾಂತ್ಯದ ವೇಳೆಗೆ ತಾಲ್ಲೂಕಿನ 105 ಕೆರೆಗಳಿಗೆ ಎತ್ತಿನಹೊಳೆ ನೀರು ಹರಿಸಲಾಗುವುದು. ಅರಸೀಕೆರೆ ಹಾಗೂ ತಿಪಟೂರು ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಯೋಜನೆ ಶೀಘ್ರದಲ್ಲೇ ಸಾಕಾರಗೊಳ್ಳಲಿದ್ದು, ಇದರಿಂದ ಮೀನುಗಾರಿಕೆಗೆ ವಿಪುಲ ಅವಕಾಶಗಳು ದೊರೆಯಲಿವೆ ಎಂದು ಶಾಸಕ ಕೆ. ಷಡಕ್ಷರಿ ತಿಳಿಸಿದರು.

ನಗರದ ಮೀನುಗಾರಿಕೆ ಇಲಾಖೆ ಆವರಣದಲ್ಲಿ ಆಯೋಜಿಸಿದ್ದ ಮೀನುಗಾರಿಕೆ ಇಲಾಖೆ ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಯೋಜನೆಯಡಿ ವಿವಿಧ ಸವಲತ್ತುಗಳು ಮತ್ತು ಮತ್ಸ್ಯವಾಹಿನಿ ವಾಹನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೀನುಗಾರಿಕೆಯನ್ನು ರೈತರು ಉಪಕಸುಬಾಗಿ ಅಳವಡಿಸಿಕೊಳ್ಳಬಹುದು. ಇದರಿಂದ ಹೆಚ್ಚಿನ ಆದಾಯ ಗಳಿಸಲು ಸಾಧ್ಯವಿದೆ ಎಂದರು.

ಸಿಲ್ಕ್, ಮಿಲ್ಕ್ ಹಾಗೂ ಫಿಶ್ ರೈತರ ಆದಾಯವನ್ನು ಹೆಚ್ಚಿಸುವ ಪ್ರಮುಖ ಉಪಕಸುಬುಗಳಾಗಿವೆ. ತಾಲ್ಲೂಕಿನಲ್ಲಿ ಮೀನುಗಾರಿಕೆಗೆ ವಿಪುಲ ಅವಕಾಶಗಳಿದ್ದು, ವರ್ಷಾಂತ್ಯಕ್ಕೆ 105 ಕೆರೆಗಳಿಗೆ ಎತ್ತಿನಹೊಳೆ ನೀರು ಹರಿಯುವ ಹಿನ್ನೆಲೆಯಲ್ಲಿ ಮೀನುಗಾರಿಕೆ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ಸಿಗಲಿದೆ ಎಂದು ಅವರು ಹೇಳಿದರು.

ಮೀನುಗಾರಿಕೆ ಕೇವಲ ಆದಾಯ ತರುವ ಉದ್ಯಮವಲ್ಲ, ಮನುಷ್ಯನ ಆರೋಗ್ಯಕ್ಕೂ ಉತ್ತಮ ಆಹಾರ ಒದಗಿಸುವ ಕ್ಷೇತ್ರವಾಗಿದೆ. ತಾಲ್ಲೂಕಿನ ಮೀನುಗಾರರಿಗೆ ಅಗತ್ಯ ಸೌಕರ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದ್ದು, ಮತ್ಸ್ಯಾಶ್ರಯ ಯೋಜನೆಯಡಿ ಮನೆ ನಿರ್ಮಾಣಕ್ಕೂ ಕ್ರಮ ಕೈಗೊಳ್ಳಲಾಗಿದೆ. ತಮ್ಮ ಜಮೀನುಗಳಲ್ಲಿ ಮೀನುಗಾರಿಕೆ ನಡೆಸುವ ರೈತರಿಗೆ ಅಗತ್ಯ ಅನುದಾನ ಒದಗಿಸಲಾಗುವುದು ಎಂದು ಹೇಳಿದರು.

ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ನಂಜುಂಡಪ್ಪ, ತಾಲ್ಲೂಕಿನ ನೊಣವಿನಕೆರೆ, ಈಚನೂರು ಕೆರೆ, ಕರಡಿಕೆರೆ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ದೊಡ್ಡ ಕೆರೆಗಳಿದ್ದು, ಮೀನುಗಾರಿಕೆಗೆ ಉತ್ತಮ ಅವಕಾಶಗಳಿವೆ. ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮೀನು ಹೊಂಡಗಳ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಜಿಲ್ಲೆಯಲ್ಲಿ 1.20 ಕೋಟಿ ಮೀನು ಮರಿಗಳಿಗೆ ಬೇಡಿಕೆ ಇದ್ದು, ಮೀನುಮರಿ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ನ್ಯಾಕೇನಹಳ್ಳಿ ಸುರೇಶ್, ಮುಖಂಡರಾದ ಹೊಸಳ್ಳಿ ಬಸವರಾಜು, ಶಿವಪುರ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

# ಮಳೆ ಬಂದರೆ ಕೆರೆಯಾಗಿ ಮಾರ್ಪಡುತ್ತದೆ ಹುಳಿಯಾರು ಹೆದ್ದಾರಿ! ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆ

**ಹುಳಿಯಾರು, ಜೂ. 1–** ಮಳೆ ಬಂದರೆ ಸಾಕು ಹುಳಿಯಾರಿನಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 69 ರಸ್ತೆಯು ಮಿನಿ ಕೆರೆಯಾಗಿ ಮಾರ್ಪಡುತ್ತಿದೆ. ಕಳಪೆ ಹಾಗೂ ಅವೈಜ್ಞಾನಿಕ ಚರಂಡಿ ಕಾಮಗಾರಿಯಿಂದಾಗಿ ಸಾರ್ವಜನಿಕರು ಮತ್ತು ಸ್ಥಳೀಯರು ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ. ಕಳೆದ ಎರಡು ದಿನಗಳ ಹಿಂದೆ ಸುರಿದ ಮಳೆಯಿಂದಾಗಿ ಮೊಳಕಾಲುದ್ದದ್ದ ನೀರು ನಿಂತು ವಾಹನ ಸಂಚಾರಕ್ಕೆ ಭಾರಿ ತೊಂದರೆಯುಂಟಾಗಿತ್ತು.

ಮಂಗಳೂರುನಿಂದ ವಿಶಾಖಪಟ್ಟಣ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಹುಳಿಯಾರು ಪಟ್ಟಣದಲ್ಲಿ ಕಳೆದ ಆರೇಳು ವರ್ಷಗಳಿಂದ ನಡೆಯುತ್ತಿದ್ದರೂ ಸಹ ಇದೂವರೆವಿಗೂ ಪೂರ್ಣವಾಗಿಲ್ಲ. ಒಂದೊಂದು ಕಿಲೋ ಮೀಟರ್‌ಗೂ ಸಹ ಪ್ರತಿಭಟನೆ, ಧರಣಿ ಮಾಡಿ ಕಾಮಗಾರಿ ಮಾಡಿಸಿಕೊಳ್ಳಬೇಕಾದ ಅನಿವಾರ್ಯ ಕರ್ಮ ಸೃಷ್ಠಿಯಾಗಿತ್ತು.

ಆಗಿರುವ ಕಾಮಗಾರಿಯೂ ಸಹ ಅವೈಜ್ಞಾನಿಕವಾಗಿದ್ದು ಸಮರ್ಪಕವಾಗಿ ಚರಂಡಿ ನೀರು ಹರಿಯುವುದಿಲ್ಲ. ಮಳೆ ಸುರಿಯುತ್ತಿದ್ದಂತೆ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯುವ ಬದಲು, ರಸ್ತೆಯ ಮೇಲೆ ಉಕ್ಕಿ ಹರಿಯುತ್ತಿದೆ. ಮಳೆ ನೀರಿನ ಜತೆಗೆ ಚರಂಡಿಯಲ್ಲಿ ಸಂಗ್ರಹವಾದ ತ್ಯಾಜ್ಯ ಹೆದ್ದಾರಿಯಲ್ಲೇ ನಿಲ್ಲುತ್ತಿರುವುದರಿಂದ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವಂತಾಗಿದೆ. ರಸ್ತೆ ಸಂಪೂರ್ಣ ಜಲಾವೃತವಾಗುತ್ತಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಭಾರಿ ಅಡಚಣೆ ಉಂಟಾಗುತ್ತದೆ.

ಕೇವಲ ರಸ್ತೆಯಷ್ಟೇ ಅಲ್ಲ, ರಸ್ತೆ ಬದಿಯಲ್ಲಿರುವ ಮನೆಗಳು ಮತ್ತು ಅಂಗಡಿ ಮಳಿಗೆಗಳಿಗೂ ಚರಂಡಿಯ ಕೊಳಚೆ ಮಿಶ್ರಿತ ಮಳೆ ನೀರು ನುಗ್ಗುತ್ತಿದೆ. ಕಳೆದ ಎರಡು ವರ್ಷದ ಹಿಂದಷ್ಟೆ ಮಳೆ ನೀರು ನುಗ್ಗಿ ನಮ್ಮ ಈರುಳ್ಳಿ ಗೋಡನ್ ಕುಸಿದು ಬಿತ್ತು. ಅಲ್ಲದೆ ರಾತ್ರಿ ಮಳೆ ಬಂದರಂತೂ ಇಡೀ ರಾತ್ರಿ ಜಾಗರಣೆ ಮಾಡಿ ನೀರು ಬಾಚಬೇಕಿದೆ. ಅಲ್ಲದೆ ದುರ್ನಾತ ಕುಡಿಯುವ ಜತೆಗೆ ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿದ್ದು, ಆಸ್ತಿ ಪಾಸ್ತಿಗೆ ಹಾನಿಯಾಗುತ್ತಿದೆ ಎಂದು ಹಾರೂನ್ ಅವರು ತಮ್ಮ ಅಳಲು ತೋಡಿಕೊಂಡರು.

ಈ ಕುರಿತು ಕೇಂದ್ರ ಸಚಿವವಿ. ಸೋಮಣ್ಣ ಮತ್ತು ಶಾಸಕ ಸಿ.ಬಿ. ಸುರೇಶ್ ಬಾಬು ಅವರ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಸಂಸದರು ಖುದ್ದಾಗಿ ಗುತ್ತಿಗೆದಾರರಿಗೆ ಮತ್ತು ಇಂಜಿನಿಯರ್‌ಗಳಿಗೆ ಕಟ್ಟುನಿಟ್ಟಾದ ಸೂಚನೆ ನೀಡಿದ್ದರೂ, ಕಾಮಗಾರಿಯ ಲೋಪಗಳನ್ನು ಸರಿಪಡಿಸದೆ ನಿರ್ಲಕ್ಷ್ಯಿಸಿದ್ದಾರೆ.



ಚರಂಡಿಯಲ್ಲಿ ತುಂಬಿಕೊಂಡಿರುವ ಹೂಳು ಹಾಗೂ ಕಸವನ್ನು ತೆರವುಗೊಳಿಸದಿರುವುದು ಈ ಅವಾಂತರಕ್ಕೆ ಮೂಲ ಕಾರಣವಾಗಿದೆ. ಪರಿಣಾಮ ಪ್ರತಿ ಮಳೆಯಲ್ಲೂ ವಾಹನ ಸವಾರರು, ಅಕ್ಕಪಕ್ಕದ ಮನೆ ಅಂಗಡಿಯವರು ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಹಿಡಿ ಶಾಪ ಹಾಕಿ ದಿನದೂಡುತ್ತಿದ್ದಾರೆ.

2 ತಿಂಗಳ ಹಿಂದಷ್ಟೆ ಕ್ಲೀನ್ ಮಾಡಿಸಲು ಪತ್ರ: ಮಳೆ ಬಂದಾಗ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ರಸ್ತೆಯಲ್ಲಿ ನಿಂತು ವಾಹನ ಸಾವರರಿಗೆ ತೊಂದರೆಯಾಗುತ್ತದೆ ಎಂದು 2 ತಿಂಗಳ ಹಿಂದಷ್ಟೆ ಕಟ್ಟಿಕೊಂಡಿರುವ ಚರಂಡಿ ಕ್ಲೀನ್ ಮಾಡಿಸಲು ಹೈವೆ ಎಂಜಿನಿಯರ್‌ಗೆ ಪತ್ರ ಬರೆಯಲಾಗಿತ್ತು. ಆದರೆ ಅವರು ನಿರ್ಲಕ್ಷ್ಯದಿಂದ ಚರಂಡಿಯಲ್ಲಿ ತ್ಯಾಜ್ಯ ಸಂಗ್ರಹವಾಗಿ ನೀರು ಸರಗವಾಗಿ ಹರಿಯದೆ ರಸ್ತೆಯಲ್ಲಿ ನೀರು ನಿಂತಿತ್ತು. ಈಗಾಗಲೇ ಅವರನ್ನು ಖುದ್ದು ಕರೆಸಿ ಸಮಸ್ಯೆ ವಿವರಿಸಲಾಗಿದ್ದು ಕ್ಲೀನ್ ಮಾಡಿಸಲು ಅವರ ಬಳಿ ಯಂತ್ರವಿಲ್ಲ ಶಿರಾ ಪುರಸಭೆಯಲ್ಲಿರುವ ಯಂತ್ರ ಬಾಡಿಗೆ ತಂದು ಕ್ಲೀನ್ ಮಾಡಿಸಿದರೆ ಹಣ ಕೊಡುವುದಾಗಿ ತಿಳಿಸಿದ್ದಾರೆ. ಯಂತ್ರ ತರಿಸಿ ಕ್ಲೀನ್ ಮಾಡಿಸಲಗುವುದು ಎಂದು ಪ.ಪಂ. ಮುಖ್ಯಾಧಿಕಾರಿ ಮಂಜುನಾಥ್ ತಿಳಿಸಿದ್ದಾರೆ.

# ಕಾರ್ಮಿಕ ಇಲಾಖೆ ಸ್ಮಾರ್ಟ್ ಕಾರ್ಡ್ ಸೌಲಭ್ಯ ಸದುಪಯೋಗಕ್ಕೆ ಸಲಹೆ



**ಮಧುಗಿರಿ, ಜೂ. 1–** ಕಟ್ಟಡ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಕಾರ್ಮಿಕ ಇಲಾಖೆ ವತಿಯಿಂದ ನೀಡಲಾಗುತ್ತಿರುವ ಸ್ಮಾರ್ಟ್ ಕಾರ್ಡ್‌ಗಳಿಂದ ದೊರೆಯುವ ಸೌಲಭ್ಯ ಪಡೆದುಕೊಳ್ಳಬೇಕು ಎಂದು ನವ ನಿರ್ಮಾಣ ಕಟ್ಟಡ ಕಟ್ಟುವವರ ಮತ್ತು ಇತರೆ ನಿರ್ಮಾಣ ಕೂಲಿ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಹೆಚ್.ಸಿ.ಶಾಮಣ್ಣ ರೆಡ್ಡಿ ಸಲಹೆ ನೀಡಿದರು. ಪಟ್ಟಣದ ಪಾವಗಡ ರಸ್ತೆಯ ಸಮೀಪವಿರುವ ಡಾ.ಬಿ.ಆರ್.ಅಂಬೇಡ್ಕರ್ ಕಂಚಿನ ಪ್ರತಿಮೆಯ ಬಳಿ ವಿಶ್ವ ಕಾರ್ಮಿಕರ ದಿನಾಚರಣೆಯ ಅಂಗವಾಗಿ 130 ಜನರಿಗೆ ಸ್ಮಾರ್ಟ್ ಕಾರ್ಡ್‌ಗಳ ವಿತರಣೆ ಹಾಗೂ ಲೇಬರ್ ಕಾರ್ಡ್ ಹೊಂದಿರುವ 24 ಕಟ್ಟಡ ಕಾರ್ಮಿಕರಿಗೆ ಸೇಫ್ಟಿ ಕಿಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಸರ್ಕಾರವು ಕಾರ್ಮಿಕರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮ ಜಾರಿ ಮಾಡಿದ್ದು, ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಲು ಸ್ಮಾರ್ಟ್ ಕಾರ್ಡ್‌ಗಳ ಅವಶ್ಯಕತೆ ಹೆಚ್ಚಿದೆ. ಫಲಾನುಭವಿಗಳು ಕಡ್ಡಾಯುವಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. ಜತೆಗೆ ಕಾರ್ಮಿಕರು ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಳ್ಳಬೇಕಾಗಿದೆ. ಕಾರ್ಮಿಕರು ಒಗ್ಗಟ್ಟಿನಿಂದ ಇರುವುದರೊಂದಿಗೆ ಅವರ ಐಕ್ಯತೆಯು ಚಿರಾಯುವಾಗಿರಬೇಕು ಎಂದರು. ಕಾರ್ಮಿಕ ಅಧಿಕಾರಿ ಶ್ರೀಕಾಂತ್ ಮಾತನಾಡಿ, ಕಾರ್ಮಿಕ ಇಲಾಖೆಯು ಕಾರ್ಮಿಕರ ಕಲ್ಯಾಣಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಸಿಕೊಂಡರೆ ಶೈಕ್ಷಣಿಕ ನೆರವು, ಮದುವೆ ಸಹಾಯಧನ, ವೈದ್ಯಕೀಯ ಸೌಲಭ್ಯ, ಪಿಂಚಣಿ ಹಾಗೂ ಅಪಘಾತ ಪರಿಹಾರ ಸೇರಿದಂತೆ ಹಲವು ಸೌಲಭ್ಯ ದೊರೆಯಲಿವೆ. ಅಸಂಘಟಿತ ಕಾರ್ಮಿಕರಿಗಾಗಿ ರಾಜ್ಯ ಸರ್ಕಾರವು ಅಂಬೇಡ್ಕರ್ ಸಹಾಯ ಹಸ್ತ ಎಂಬ ಯೋಜನೆ ಜಾರಿಗೊಳಿಸಿದ್ದು, ಕಡ್ಡಾಯವಾಗಿ ಇ–ಶ್ರಮ್ ಪೋರ್ಟಲ್‌ನಲ್ಲಿ ಕಾರ್ಮಿಕರು ನೋಂದಣಿ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ವಿ.ದಾಸ್, ಜಿಲ್ಲಾಧ್ಯಕ್ಷ ಗೋವಿಂದರಾಜು, ತಾಲ್ಲೂಕು ಅಧ್ಯಕ್ಷ ನೇರಳೆಕೆರೆ ರಂಗನಾಥ್, ಕೆ.ಹೆಚ್.ಆನಂದ್ ಕುಮಾರ್, ವೇಣುಗೋಪಾಲ್, ಭಾಗ್ಯಮ್ಮ, ನವಾಜ್, ಜಗದೀಶ್, ರಾಮಾಂಜನೇಯ, ಮಂಜುನಾಥ್, ಪಾರ್ವತಿ ಹಾಗೂ ಕಾರ್ಮಿಕರು ಪಾಲ್ಗೊಂಡಿದ್ದರು.

# ಕರ್ನಾಟಕ ಅಭಿವೃದ್ಧಿ ದೃಷ್ಟಿಯಿಂದ ಖರ್ಗೆ, ದರ್ಶನಾಪೂರರಿಗೆ ಡಿಸಿಎಂ; ತುನ್ನೂರರಿಗೆ ಸಚಿವ ಸ್ಥಾನ ನೀಡಲು ಹೈಕಮಾಂಡ್‌ಗೆ ಮನವಿ

**ಯಾದಗಿರಿ:ಜೂ.1:** ರಾಜ್ಯದಲ್ಲಿ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ, ಹಿರಿಯ ನಾಯಕರು ಪ್ರಿಯಾಂಕ್ ಖರ್ಗೆ ಹಾಗೂ ಶರಣಬಸಪ್ಪ ದರ್ಶನಾಪೂರ ಅವರಿಗೆ ಉಪ ಮುಖ್ಯಮಂತ್ರಿ (ಡಿಸಿಎಂ) ಸ್ಥಾನ ಮತ್ತು ಹಿರಿಯ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಹೈಕಮಾಂಡ್‌ಗೆ ಮನವಿ ಸಲ್ಲಿಸಲಾಗಿದೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಡಾ. ಅಮರಣ್ಣ ಗಡ್ಡೆಸೂಗೂರ ಹಾಗೂ ಶರಣಪ್ಪಗೌಡ ಮಾಲಿ ಪಾಟೀಲ್ ಕೌಳೂರ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ, ಆಡಳಿತಾತ್ಮಕ ಬಲವರ್ಧನೆ ಹಾಗೂ ಪ್ರಾದೇಶಿಕ ಸಮತೋಲನದ ದೃಷ್ಟಿಯಿಂದ ಈ ಭಾಗದ ಸಮರ್ಥ ನಾಯಕರಿಗೆ ಸಚಿವ ಸಂಪುಟದಲ್ಲಿ ಉನ್ನತ ಸ್ಥಾನಮಾನ ನೀಡುವುದು ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಈಗಾಗಲೇ ರಾಜ್ಯ ಸಚಿವ ಸಂಪುಟದಲ್ಲಿ ವಿವಿಧ ಸಮುದಾಯಗಳಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವ ಕುರಿತು ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿರುವ ನಾಯಕರಾದ ಪ್ರಿಯಾಂಕ್ ಖರ್ಗೆ ಹಾಗೂ ಶರಣಬಸಪ್ಪ ದರ್ಶನಾಪೂರ ಅವರಿಗೆ ಡಿಸಿಎಂ ಸ್ಥಾನ ನೀಡಿದಲ್ಲಿ ಪ್ರದೇಶದ ಸಾಮಾಜಿಕ, ಶೈಕ್ಷಣಿಕ, ಕೈಗಾರಿಕಾ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಹೊಸ ಚೈತನ್ಯ ದೊರೆಯಲಿದೆ ಎಂದು ಅವರು ತಿಳಿಸಿದರು.

ಅದೇ ರೀತಿ, ಯಾದಗಿರಿ ಕ್ಷೇತ್ರದ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಎಪಿಎಂಸಿ ಸದಸ್ಯ, ಜಿಲ್ಲಾ ಪಂಚಾಯಿತಿ ಸದಸ್ಯ, ವಿಧಾನ ಪರಿಷತ್ ಸದಸ್ಯ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಅಪಾರ ಆಡಳಿತಾತ್ಮಕ ಅನುಭವ ಗಳಿಸಿರುವ ನಾಯಕರು. ಪ್ರಸ್ತುತ ಶಾಸಕರಾಗಿ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಶಾಶ್ವತ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡುತ್ತಿರುವ ಅವರು ಸರಳತೆ, ಸಜ್ಜನಿಕೆ ಹಾಗೂ ಜನಪರ ಧೋರಣೆಯಿಂದ ಜನರ ಮೆಚ್ಚುಗೆ ಪಡೆದಿದ್ದಾರೆ ಎಂದು ಶ್ಲಾಘಿಸಿದರು.

ಯಾದಗಿರಿ ಜಿಲ್ಲೆಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ದೊರಕಿಸುವ ನಿಟ್ಟಿನಲ್ಲಿ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರಿಗೆ ಸಚಿವ ಸ್ಥಾನ ನೀಡುವುದು ಸೂಕ್ತವಾಗಿದ್ದು, ಇದು ಜಿಲ್ಲೆಯ ಅಭಿವೃದ್ಧಿಗೆ ಹೊಸ ದಿಕ್ಕು ನೀಡುವ ಜೊತೆಗೆ ಪ್ರಾದೇಶಿಕ ಸಮತೋಲನಕ್ಕೂ ಸಹಕಾರಿಯಾಗಲಿದೆ ಎಂದು ಅವರು ಒತ್ತಾಯಿಸಿದರು.

ಕಲ್ಯಾಣ ಕರ್ನಾಟಕ ಭಾಗದ ಜನರ ಆಶೋತ್ತರಗಳನ್ನು ಪರಿಗಣಿಸಿ, ಪಕ್ಷದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ನಾಯಕರು ಈ ಬೇಡಿಕೆಯನ್ನು ಗಂಭೀರವಾಗಿ ಪರಿಶೀಲಿಸಿ ನ್ಯಾಯ ಒದಗಿಸಬೇಕು



ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶರಣಬಸಪ್ಪ ಪಾಟೀಲ್ ಕುರಕುಂದಿ ಅಮರಣ್ಣ ಸಾಹುಕಾರ್ ಗಡ್ಡೆಸೂಗೂರ ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE